# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮಾರ್ಚ್ 17, 2022

ಸಂಪುಟ : 48 ಸಂಚಿಕೆ : 306 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com







## ಪದ್ಧತಿ ಪ್ರಕಾರವೇ ನೆರವೇರಿದ ಮಹಾಪೂಜೆ

### ದುಗ್ಗಮ್ಮನ ಜಾತ್ರೆಗೆ ಹರಿದು ಬಂದ ಜನಸಾಗರ, ಹರಕೆ ತೀರಿಸಿದ ಭಕ್ತರು





ಬುಧವಾರದ ಅಲಂಕಾರದಲ್ಲಿ ದುಗ್ಗಮ್ಮ ದೇವಿ, ಬೇವಿನುಡಿಗೆಯ ಹರಕೆ ತೀರಿಸುತ್ತಿರುವ ಭಕ್ತರು. ಪುಟ್ಟಿಯಲ್ಲಿ ಚರಗ ಕೊಂಡೊಯ್ಯುತ್ತಿರುವುದು.

ದಾವಣಗೆರೆ, ಮಾ. 16- ನಗರದ ಅಧಿದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ಬುಧವಾರ ಬೆಳಿಗ್ಗೆ ಪದ್ಧತಿಯಂತೆಯೇ 'ಮಹಾಪೂಜೆ' ಶಾಂತಿಯುತವಾಗಿ ನೆರವೇರಿತು.

ಬೆಳಿಗ್ಗೆ ಬಲಿ ಪೂಜೆ ನಂತರ ಬೇಯಿಸಿದ ಜೋಳದ ರಾಶಿಗೆ ರಕ್ತವನ್ನು ಬೆರೆಸಿ, ಪೂಜೆ ನೆರವೇರಿಸಿ ಚರುಗಕ್ಕೆ ಚಾಲನೆ ನೀಡಲಾಯಿತು. ಗುಡಿಯ ಆವರಣದಿಂದ ಹೊರಟ ಸಾಂಪ್ರದಾಯಿಕ ಮುಖಂಡರ ನೇತೃತ್ವದ ಚರುಗದ ಮೆರವಣಿಗೆ ಊರ ಗಡಿವರೆಗೂ ತೆರಳಿ ಚರುಗ ಚೆಲ್ಲಿತು.


ಚರುಗ ಮುಂದೆ ಸಾಗಿದಂತೆ, ಉತ್ಸಾಹಿ ಯುವಕರ ದಂಡು ಹುಲಿಗ್ಯೋ ಹುಲಿಗ್ಯೋ ಎಂದು ಕೇಕೆ ಹಾಕುತ್ತಾ, ಆರ್ಭಟಿಸುತ್ತಾ ಬೇಯಿಸಿದ ಜೋಳದ ಕಾಳನ್ನು ಪುಟ್ಟ-ಪುಟ್ಟ ಬುಟ್ಟಿಗಳಲ್ಲಿ ತುಂಬಿಕೊಂಡು ದೇವಸ್ಥಾನ ಆವರಣದಿಂದ ಚರುಗದವರೆಗೂ ಓಡುತ್ತ ಹೋಗಿ ದೊಡ್ಡ ಬುಟ್ಟಿಗೆ ಸುರುವುತ್ತಾರೆ. ಜಾತ್ರೆಯ ಮುಖ್ಯ ಆಕರ್ಷಣೆ ಯಾಗಿರುವ ಈ ಚರುಗವನ್ನು ಕಣ್ತುಂಬಿಕೊಳ್ಳಲು ಜನತೆ ಕಾತರದಿಂದ ಕಾಯುತ್ತಿರುತ್ತದೆ.

ಹೀಗೆ ಚರುಗ ಚೆಲ್ಲುವ ಮೂಲಕ ಊರಿನಲ್ಲಿ ದುಷ್ಟಶಕ್ತಿಗಳನ್ನು ದೂರ ಮಾಡಿ, ಮಳೆ-ಬೆಳೆ ಸಮೃದ್ಧಿಯಾಗಿ ಕೊಡು ಶಾಂತಿ, ನೆಮ್ಮದಿ ಕರುಣಿಸು ಎಂದು ಶ್ರೀ ದುರ್ಗಾ ಮಾತೆಯನ್ನು ಪ್ರಾರ್ಥಿಸಲಾಯಿತು.

ಅತ್ತ ಚರುಗ ಸಾಗುತ್ತಲೇ ನಗರದ ನಾಲ್ಕೂ ದಿಕ್ಕುಗಳಿಂದಲೂ ಜನರು ದಂಡು-ದಂಡಾಗಿ ಭಕ್ತಿಪರವಶರಾಗಿ, ಅಮ್ಮನ (3ನೇ ಪುಟಕ್ಕೆ)

## ಹಣಕಾಸು ಶಿಸ್ತು ಮೀರಿಲ್ಲ

### ರೊಟ್ಟಿಗೆ ಸಾಲ ಮಾಡಿದ್ದೇವೆ, ಹೋಳಿಗೆಗೆ ಅಲ್ಲ: ಬೊಮ್ಮಾಯಿ



“ನಮಗೆ ಸಾಲ ಮಾಡಲು ಹೆಚ್ಚಿನ ಅವಕಾಶ ಇದ್ದರೂ, ಅದನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳದೆ ಜನರಿಗೆ ರೊಟ್ಟಿ ಕೊಡಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ಮಾಡಿದ್ದೇವೆ

ಬೆಂಗಳೂರು, ಮಾ. 16 - ರೊಟ್ಟಿ ಕೊಡಲು ಸಾಲ ಮಾಡಿದ್ದೇವೆಯೇ ಹೊರತು, ಹೋಳಿಗೆ ತಿನ್ನಲು ಅಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಪ್ರತಿಪಕ್ಷಗಳ ಟೀಕೆಗೆ ತಿರುಗೇಟು ನೀಡಿದ್ದಾರೆ.

ಬಜೆಟ್ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಮುಖ್ಯಮಂತ್ರಿ, ಕೊರೊನಾ ಸಂಕಷ್ಟದಲ್ಲೂ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮವಾಗೇ ತೆಗೆದುಕೊಂಡು ಹೋಗಿದ್ದೇವೆ. ನಮಗೆ ಸಾಲ ಮಾಡಲು ಹೆಚ್ಚಿನ ಅವಕಾಶ ಇದ್ದರೂ, ಅದನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳದೆ ಜನರಿಗೆ ರೊಟ್ಟಿ ಕೊಡಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ಮಾಡಿದ್ದೇವೆ ಎಂದರು.

ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈವರೆಗೂ ಹಣಕಾಸು ಶಿಸ್ತನ್ನು ಮೀರಿಲ್ಲ. ಕೇಂದ್ರ ಮತ್ತು ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಇರುವುದರಿಂದಲೇ ಇದು ಸಾಧ್ಯವಾಗಿದೆ, ನಮಗೆ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ರಸ್ತೆ, ರೈಲು ಸೇರಿದಂತೆ ಎಲ್ಲಾ ಹಂತಗಳಲ್ಲೂ ಮೂಲಸೌಕರ್ಯಗಳನ್ನು ಕಲ್ಪಿಸಲು ಮತ್ತು ಜನರಿಗೆ ಉದ್ಯೋಗ ಒದಗಿಸಲು ಸದಾ ಬೆನ್ನೆಲುಬಾಗಿ ನಿಂತಿದೆ.

ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಮತ್ತು ದುಡಿಯುವ ಕೈಗಳಿಗೆ ಸಹಕಾರಿಯಾಗಲು ಸಾಲ ಮಾಡಿದ್ದೇವೆ. ಕೊರೊನಾ ಸಾಂಕ್ರಾಮಿಕದಿಂದ ರಾಜ್ಯ ಸಂಕಷ್ಟಕ್ಕೆ ಸಿಲುಕಿತು, ನೀವು ಐದು ವರ್ಷ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ಆರ್ಥಿಕ ಪ್ರಗತಿ ದರ ಶೇ. 10 ರಿಂದ 12 ರಷ್ಟಿದ್ದರೂ 1.20 ಲಕ್ಷ ಕೋಟಿ ರೂ. ಸಾಲ ಏಕೆ ಮಾಡಿದಿರಿ? ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

ಯಡಿಯೂರಪ್ಪನವರು ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದಾರೆ, ನಾವೂ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೇವೆ, ನಮಗೆ ಕೇಂದ್ರದ ನೆರವೂ ದೊರೆಯುತ್ತಿದೆ ಎಂದರು.

ಕಳೆದ ಎರಡು ವರ್ಷಗಳಿಂದ ಕೋವಿಡ್ ಎದುರಾಗಿದ್ದರಿಂದ ನಿರೀಕ್ಷಿತ ಮಟ್ಟದಲ್ಲಿ ಆರ್ಥಿಕ ಅಭಿವೃದ್ಧಿ ಸಾಧಿಸಲು ಆಗಲಿಲ್ಲ. ಆದರೆ, ಈ ಬಾರಿ ಶೇಕಡ 9.5ರಷ್ಟು ಆರ್ಥಿಕ ಅಭಿವೃದ್ಧಿ ಸಾಧಿಸುವ ಗುರಿ ಇದೆ.

ಕೋವಿಡ್‌ನಿಂದಾಗಿ ಈ ಬಾರಿ ಬಜೆಟ್ ಗಾತ್ರ ಕಡಿಮೆಯಾಗಲಿದೆ ಎಂಬ ಆತಂಕವಿತ್ತು, ಆದರೆ ಕಳೆದ ಬಜೆಟ್‌ಗಿಂತ ಶೇ. 7.9ರಷ್ಟು ಬಜೆಟ್ ಗಾತ್ರವನ್ನು ಹೆಚ್ಚಳ ಮಾಡಿದ್ದೇವೆ. ಇದು ಜನಾಧರಿತ ಬಜೆಟ್ ಎಂದು ಬಣ್ಣಿಸಿದರು.

ರಾಜ್ಯದಲ್ಲಿ ಆರ್ಥಿಕ ಚಟುವಟಿಕೆಗಳು ನಿಧಾನವಾಗಿ ಚೇತರಿಕೆ ಕಾಣುತ್ತಿವೆ, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ಕೂಡ (3ನೇ ಪುಟಕ್ಕೆ)

## ಮಕ್ಕಳ ಲಸಿಕೆ ಅಭಿಯಾನ ಆರಂಭ

### 12-14 ವರ್ಷದವರೆಗೆ ದೇಶಾದ್ಯಂತ ಲಸಿಕೆಗೆ ಚಾಲನೆ

ನವದೆಹಲಿ ಮಾ. 16 – ಕೊರೊನಾ ಲಸಿಕೆಯನ್ನು 12-14 ವರ್ಷದ ಮಕ್ಕಳಿಗೆ ನೀಡುವ ಅಭಿಯಾನವನ್ನು ದೇಶಾದ್ಯಂತ ಆರಂಭಿಸಲಾಗಿದೆ. ಮಧ್ಯ ಪ್ರದೇಶದಲ್ಲಿ ಆರೋಗ್ಯ ಸಿಬ್ಬಂದಿ ತರಬೇತಿ ಪಡೆಯುತ್ತಿರುವ ಕಾರಣ, ಅಲ್ಲಿ ಮಾರ್ಚ್ 22ರಿಂದ ಲಸಿಕಾ ಅಭಿಯಾನ ಆರಂಭವಾಗಲಿದೆ.

ಬಯಾಲಾಜಿಕಲ್ ಇ ಕಂಪನಿಯ ಕೊರ್ಬೆವ್ಯಾಕ್ಸ್ ಲಸಿಕೆಯನ್ನು ಮಕ್ಕಳಿಗೆ ನೀಡಲಾಗುತ್ತಿದೆ. 28 ದಿನಗಳ ಹಂತದಲ್ಲಿ ಡೋಸ್‌ಗಳನ್ನು ನೀಡಲಾಗುವುದು. 12-14ರ ವಯೋಮಾನದ 4.7 ಕೋಟಿ ಮಕ್ಕಳು ಲಸಿಕೆ ಪಡೆಯಲಿದ್ದಾರೆ. ಇದೇ ವೇಳೆ 60 ವರ್ಷ ಮೀರಿದ (4ನೇ ಪುಟಕ್ಕೆ)

## ಕೊರೊನಾ ಪೂರ್ಣ ಹೋಗಿಲ್ಲ

### ಲಸಿಕೆಯಿಂದ ನಿಯಂತ್ರಣಕ್ಕೆ ಬಂದಿದೆ : ಸುಧಾಕರ್

ಬೆಂಗಳೂರು, ಮಾ. 16 - ಕೋವಿಡ್ ಸಂಪೂರ್ಣವಾಗಿ ಹೋಗಿಲ್ಲ, ಆದರೆ ಲಸಿಕಾಕರಣದಿಂದ ನಿಯಂತ್ರಣ ಮಾಡಲಾಗಿದೆ, ಕೊರೊನಾ ನಿಯಂತ್ರಣದಲ್ಲಿ ಸಾಗಬೇಕಾದ ಹಾದಿ ಇನ್ನೂ ದೂರವಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು. ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಸಂಸ್ಥೆಯಲ್ಲಿ, 12 ರಿಂದ 14 ವರ್ಷದೊಳಗಿನ ಅರ್ಹ ಮಕ್ಕಳಿಗೆ ಕೋರ್ಬಿವ್ಯಾಕ್ಸ್ ಲಸಿಕೆ ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಲಸಿಕಾಕರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, (3ನೇ ಪುಟಕ್ಕೆ)







## ಅರಸೀಕೆರೆ ಗ್ರಾ.ಪಂ. ಅಧ್ಯಕ್ಷರಾಗಿ ರೇಖಾ, ಉಪಾಧ್ಯಕ್ಷರಾಗಿ ಚಂದ್ರಪ್ಪ



ಹರಪನಹಳ್ಳಿ, ಮಾ.16- ಅರಸೀಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ವೈ.ಟಿ ರೇಖಾ ಕೊಟ್ರೇಶ್ ಹಾಗೂ ಉಪಾಧ್ಯಕ್ಷರಾಗಿ ಎಂ.ಚಂದ್ರಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿದ್ದ ಡಿ.ಅಕ್ಕಮ್ಮ ಹಾಗೂ ಅಡ್ಡೇರ ಚನ್ನವೀರಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಕ್ರಮವಾಗಿ ವೈ.ಟಿ. ರೇಖಾ ಕೊಟ್ರೇಶ್ ಹಾಗೂ ಎಂ.ಚಂದ್ರಪ್ಪ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ತಹಶೀಲ್ದಾರ್ ಪ್ರಭಾಕರ ಗೌಡ ತಿಳಿಸಿದರು.

ಸಹಾಯಕ ಚುನಾವಣಾಧಿಕಾರಿ ಅರವಿಂದ, ಪಿಡಿಒ ಅಂಜಿನಪ್ಪ, ಸದಸ್ಯ ಕೊಂಡಪ್ಪರ ಆನಂದಪ್ಪ, ಮುಖಂಡರಾದ ವೈ.ಡಿ ಅಣ್ಣಪ್ಪ, ಪ್ರಶಾಂತ್ ಪಾಟೀಲ್, ಸಲಾಂ ಸಾಬ್, ವಿಶ್ವನಾಥಯ್ಯ, ಪರಶುರಾಮ್, ಅದಾಮ್‌ಸಾಬ್, ವೈ.ಟಿ. ಕೊಟ್ರೇಶ್, ಅಂಜಿನಪ್ಪ, ಮಲ್ಲೇಶ್ ಲಕ್ಷ್ಮಣ ಸೇರಿದಂತೆ ಇತರರು ಇದ್ದರು.

## ಚೌಡೇಶ್ವರಿ ಜಾತ್ರೆ ಪ್ರಯುಕ್ತ ಸತ್ಯಸಾಯಿ ಸೇವಾ ಸಮಿತಿಯಿಂದ ಮಜ್ಜಿಗೆ ವಿತರಣೆ



ದಾವಣಗೆರೆ, ಮಾ.16- ವಿನೋಬನಗರ ಒಂದನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀ ಸತ್ಯಸಾಯಿ ಸೇವಾ ಸಮಿತಿಯ ವತಿಯಿಂದ ಭಕ್ತಾದಿಗಳಿಗೆ ಉಚಿತ ಮಜ್ಜಿಗೆ ವಿತರಣಾ ಕಾರ್ಯಕ್ರಮ ನಡೆಯಿತು. ಸಮಿತಿಯ ಸಂಚಾಲಕರಾದ ಭೋಜರಾಜ್ ಎಲ್. ದೈವಜ್ಞ ಅವರ ನೇತೃತ್ವದಲ್ಲಿ ನಡೆದ ಈ ಸೇವಾ ಕಾರ್ಯಕ್ರಮವನ್ನು ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ಜಿಲ್ಲಾಧ್ಯಕ್ಷ ಪ್ರಶಾಂತ್ ಎಸ್.ಕುಮಾರ್ ಉದ್ಘಾಟಿಸಿದರು. ಸಂಸ್ಥೆಯ ಆರ್.ಸತ್ಯನಾರಾಯಣ, ಟಿ.ಆರ್. ಗುರುರಾಜರಾವ್, ಚಂದ್ರಹಾಸ ರಾಯ್ಕರ್, ವೆಂಕಟಸುಬ್ಬಾರಾವ್, ಮಂಜಣ್ಣ, ಶ್ರೀಮತಿ ಸರೋಜಮ್ಮ, ಕು. ಸಾವಿತ್ರಿ ಮತ್ತಿತರರು ಭಾಗವಹಿಸಿದ್ದರು.

## ಕಸಾಪ ತಾಲ್ಲೂಕು ಘಟಕದ ನೂತನ ಕಚೇರಿ ಉದ್ಘಾಟನೆ



ದಾವಣಗೆರೆ, ಮಾ.16- ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಮತ್ತು ತಾಲ್ಲೂಕು ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದ ಸಂದರ್ಭದಲ್ಲಿ ಅನುಭವ ಮಂಟಪದ ಶ್ರೀ ಶಿವಪ್ರಕಾಶ ಮಹಾಸ್ವಾಮೀಜಿ ತಾಲ್ಲೂಕು ಘಟಕದ ನೂತನ ಕಚೇರಿಯನ್ನು ಉದ್ಘಾಟಿಸಿದರು.

ಶಾಸಕ ಎಸ್.ಎ. ರವೀಂದ್ರನಾಥ್, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ತಾಲ್ಲೂಕು ಕಸಾಪ ಅಧ್ಯಕ್ಷರಾದ ಸುಮತಿ ಜಯಪ್ಪ, ರೇವಣಸಿದ್ದಪ್ಪ ಅಂಗಡಿ, ರಾಘವೇಂದ್ರ ನಾಯರಿ, ದಿಳ್ಯಪ್ಪ, ಪರಮೇಶ್ವರಪ್ಪ, ಪಾಲಾಕ್ಷಪ್ಪ, ಮರಿಯಾಚಾರ್, ಷಡಕ್ಷರಪ್ಪ ಬೇತೂರು, ಸಿದ್ದಪ್ಪ, ಶಿವಕುಮಾರ್, ಪರಿಮಳ ಜಗದೀಶ್, ಮಮತ, ನಾಗವೇಣಿ, ಕಲ್ಪನ, ಸೌಭಾಗ್ಯ, ಪದ್ಮ, ರುದ್ರಾಕ್ಷಿ ಬಾಯಿ, ಸತ್ಯಭಾಮ, ಮಲ್ಲಮ್ಮ ಜಗದೀಶ್ ಕೂಲಂಬಿ, ವೀಣಾ ಕೃಷ್ಣಮೂರ್ತಿ ಮತ್ತಿತರ ಪದಾಧಿಕಾರಿಗಳು ಹಾಜರಿದ್ದರು.

## ದೆಹಲಿಯಲ್ಲಿ ನಡೆಯುವ ಸಂವಹನಕ್ಕೆ ರಂಗಸ್ವಾಮಿ ಆಯ್ಕೆ



ದಾವಣಗೆರೆ,ಮಾ.16- ಇದೇ ದಿನಾಂಕ 25 ಮತ್ತು 26 ರಂದು ನವದೆಹಲಿಯಲ್ಲಿ 'ರಾಷ್ಟ್ರೀಯ ಅಂಧ ಸಮೂಹದ ತಾಂತ್ರಿಕ ಮತ್ತು ಸಾಮಾಜಿಕ ಜಾಲ ತಾಣಗಳ ಬಳಕೆ' ವಿಷಯದ ಕುರಿತು ನಡೆಯುವ ಸಂವಹನದಲ್ಲಿ ಭಾಗವಹಿಸಲು ಜಗಳೂರು ತಾಲ್ಲೂಕಿನ ಭರಮಸಮುದ್ರ ಗ್ರಾಮದ ಅಂಧ ವಿಕಲಚೇತನ ರಂಗಸ್ವಾಮಿ ಆಯ್ಕೆಯಾಗಿದ್ದಾರೆ.

ಐಸ್ಟೆಮ್ ಬಹುರಾಷ್ಟ್ರೀಯ ಕಂಪನಿ ನವದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದ 'ಅಂಧ ಸಮೂಹದ ವಿಷಯದ ಕುರಿತಾದ ಸಂವಹನ ತಾಂತ್ರಿಕ ಮತ್ತು ಸಾಮಾಜಿಕ ಜಾಲ ತಾಣಗಳ ಬಳಕೆ ವಿಚಾರಗೋಷ್ಠಿಯನ್ನು ಆಯೋಜಿಸಿದ್ದು, ಕರ್ನಾಟಕದಿಂದ ಆಯ್ಕೆಯಾಗಿರುವುದು ಹೆಮ್ಮೆಯೆನ್ನಿಸುತ್ತದೆ ಎಂದು ಹರುಷ ವ್ಯಕ್ತಪಡಿಸಿದರು.

# ಕಂದನಕೋವಿ ಶಾಲೆಗೆ ಕೊಠಡಿ ಮಂಜೂರು



ದಾವಣಗೆರೆ, ಮಾ.16- ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರಕಿಸಲು ಸರ್ಕಾರ ನಿರಂತರ ಪ್ರಯತ್ನ ನಡೆಸುತ್ತಿದೆ ಎಂದು ಶಾಸಕ ಪ್ರೊ. ಲಿಂಗಣ್ಣ ಅಭಿಪ್ರಾಯಪಟ್ಟರು.

ಮಾಯಕೊಂಡ ಸಮೀಪದ ಕಂದನಕೋವಿ ಸರ್ಕಾರಿ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಬಿಸಿಯೂಟ, ಹಾಲು, ಸಮವಸ್ತ್ರ, ಪಠ್ಯಪುಸ್ತಕ ನೀಡಿ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿದೆ. ಪ್ರತಿ ಹಳ್ಳಿಯಲ್ಲೂ ಶೌಚಾಲಯ, ಶಾಲಾ ಕೊಠಡಿ ನಿರ್ಮಾಣಕ್ಕೆ ಸಾಕಷ್ಟು ಅನುದಾನ ನೀಡಲಾಗುತ್ತಿದೆ. ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಶಾಲೆಗೆ ಕರೆತಂದು ಸರ್ವರಿಗೂ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಪೋಷಕರು ಅನಗತ್ಯ ಖಾಸಗಿ ಶಾಲೆ ಗೀಳಿನಿಂದ ಹೊರಬಂದು ಸರ್ಕಾರಿ ಶಾಲೆಗಳಿಗೆ ಪ್ರೋತ್ಸಾಹ ನೀಡಲು ಮುಂದಾಗಬೇಕು ಎಂದರು.

ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಉತ್ತಮ ತರಬೇತಿ ಹೊಂದಿದ ನುರಿತ ಶಿಕ್ಷಕರಿದ್ದಾರೆ ಹಾಗೂ ಇಂಗ್ಲಿಷ್ ಮಾಧ್ಯಮ ಸೌಲಭ್ಯವಿದೆ. ಕೆಲ ಶಿಕ್ಷಕರು ಸ್ವ-ಇಚ್ಛೆಯಿಂದ ವಿಶೇಷ ತರಗತಿ ನಡೆಸುತ್ತಿದ್ದಾರೆ ಎಂದು ಪ್ರಶಂಸಿಸಿದರು.

### ಶಾಸಕ ಲಿಂಗಣ್ಣ ಭರವಸೆ

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ದೇವೇಂದ್ರಪ್ಪ ಅವರ ಮನವಿಯಂತೆ ಶಾಲೆಗೆ ಅಗತ್ಯವಿರುವಷ್ಟು ಡೆಸ್ಕ್ ದೇಣಿಗೆ ನೀಡುವುದಾಗಿ ಘೋಷಿಸಿದರು.

ದೊಡ್ಡಾಲಘಟ್ಟ ಸರ್ಕಾರಿ ಶಾಲಾ ಶಿಕ್ಷಕ ಶಿವಕುಮಾರ್, ಚಿತ್ರಕಲಾ ಶಿಕ್ಷಕ ವೀರೇಶ್ ಮಾತನಾಡಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ದೇವೇಂದ್ರಪ್ಪ, ಉಪಾಧ್ಯಕ್ಷ ರವಿ ಮತ್ತು ಸದಸ್ಯರು, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಗಾಯತ್ರಿ ಬಾಯಿ, ಸದಸ್ಯರಾದ ಭಾರತಮ್ಮ, ಶಿವಗಂಗಮ್ಮ, ಕರಿಬಸಪ್ಪ ಮುಖಂಡರಾದ ದ್ಯಾಮನಗೌಡ, ಪರುಸಪ್ಪ, ಮುಖ್ಯ ಶಿಕ್ಷಕಿ ರಾಜೇಶ್ವರಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರಾಣೇಬೆನ್ನೂರು ನಗರಸಭೆ; ಉಳಿತಾಯ ಬಜೆಟ್

ರಾಣೇಬೆನ್ನೂರು, ಮಾ.16- ಇಲ್ಲಿನ ನಗರಸಭೆಯ ಇಂದಿನ ಸರ್ವಸದಸ್ಯರ ಸಭೆಯಲ್ಲಿ 2022-23 ನೇ ಸಾಲಿಗೆ ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ ಮಂಡಿಸಿದ 1.69 ಕೋಟಿ ಉಳಿತಾಯದ ಬಜೆಟ್ ಅನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಗರಸಭೆ ಕರ, ಸರ್ಕಾರದ ಅನುದಾನ, ಪ್ರಾರಂಭಿಕ ಶಿಲ್ಕು ಜೊತೆಗೆ ನಿರೀಕ್ಷಿತ ಅನುದಾನ ಮುಂತಾದವುಗಳು ಸೇರಿದಂತೆ 70 ಕೋಟಿ ಆದಾಯದಲ್ಲಿ, ವಿವಿಧ ರಸ್ತೆ, ಗಟಾರ, ಮಳಿಗೆ ರಿಪೇರಿ ಮುಂತಾದ ಕಾಮಗಾರಿಗಳಿಗೆ ಹಣ ವಿನಿಯೋಗ ಮಾಡಲಾಗುವುದು ಎಂದು ನಗರಾಧ್ಯಕ್ಷೆ ವಿವರಿಸಿದರು.

**ಬೋಗಸ್ ಬಜೆಟ್:** ಸರ್ಕಾರದ ಯಾವುದೇ ಅನುದಾನ ಬರುವ ಬಗ್ಗೆ ಅಧಿಕೃತ ದಾಖಲೆಗಳಿಲ್ಲದೆ ಕೇವಲ ನಿರೀಕ್ಷೆ ಇಟ್ಟುಕೊಂಡು ತಯಾರಿಸಲಾಗಿದ್ದು, ಜನರಿಗೆ ಸುಳ್ಳು ಭರವಸೆ ಕೊಡುವ ಬೋಗಸ್ ಬಜೆಟ್ ಇದಾಗಿದೆ ಎಂದು ಕಾಂಗ್ರೆಸ್ ನ ಪುಟ್ಟಪ್ಪ ಮರಿಯಮ್ಮನವರು ಸಭೆಯಲ್ಲಿ ಪ್ರತಿಕ್ರಿಯಿಸಿದರು.

ಉಪಾಧ್ಯಕ್ಷೆ ಕಸ್ತೂರಿ ಚಿಕ್ಕಬಿದರಿ, ಸ್ಥಾಯಿ ಸಮಿತಿಯ ಅಧ್ಯಕ್ಷ ಸಿದ್ದಪ್ಪ ಬಾಗಲರ, ಪೌರಾಯುಕ್ತ ಬಿ.ಟಿ. ಉದಯಕುಮಾರ್, ವ್ಯವಸ್ಥಾಪಕ ಜಿ. ಶಂಕರ್, ಲೆಕ್ಕ ಅಧೀಕ್ಷಕಿ ವಾಣಿಶ್ರೀ, ಮಂಜುಳಾದೇವಿ ಮತ್ತು ಮಧು ಸಾತೇನಹಳ್ಳಿ ಪಾಲ್ಗೊಂಡಿದ್ದರು. ನಾಮನಿರ್ದೇಶಿತರು ಸೇರಿದಂತೆ ಇರುವ 40 ರಲ್ಲಿ 25 ಸದಸ್ಯರು ಪಾಲ್ಗೊಂಡಿದ್ದರು.

## ಪುನೀತ್, ದಿನೇಶ್ ಶೆಟ್ಟಿ ಜನ್ಮದಿನದ ಅಂಗವಾಗಿ ವಿವಿಧ ಕಾರ್ಯಕ್ರಮಗಳು





ಪುನೀತ್ ರಾಜ್‌ಕುಮಾರ್ ಹಾಗೂ ದಿನೇಶ್ ಕೆ. ಶೆಟ್ಟಿ ಅವರ ಹುಟ್ಟುಹಬ್ಬದ ಅಂಗವಾಗಿ ದಿನೇಶ್ ಕೆ. ಶೆಟ್ಟಿ ಅಭಿಮಾನಿಗಳ ಬಳಗದಿಂದ ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳು ಇಂದು ನಡೆಯಲಿವೆ. ಬೆಳಗ್ಗೆ 10.30ಕ್ಕೆ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಸಿಹಿ ವಿತರಣೆ ಮೂಲಕ ಆರಂಭವಾಗುವ ಕಾರ್ಯಕ್ರಮವು 11 ಗಂಟೆಗೆ ಸಿದ್ದಗಂಗಾಶ್ರೀ ಸ್ವಯಂ ಪ್ರೇರಿತ ರಕ್ತ ಕೇಂದ್ರ ಮತ್ತು ವಿಭಜನಾ ಘಟಕದ ಸಹಯೋಗದೊಂದಿಗೆ ರಕ್ತದಾನ ಶಿಬಿರ ನಡೆಯಲಿದೆ.

ಮಧ್ಯಾಹ್ನ 12 ಗಂಟೆಗೆ ಶ್ರೀ ಓಂಕಾರ ಹುಚ್ಚನಾಗಂಗಸ್ವಾಮಿ ಅನಾಥ ಸೇವಾಶ್ರಮದ ಮಕ್ಕಳಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿದೆ .

ಮಧ್ಯಾಹ್ನ 1 ಗಂಟೆಗೆ ವನಿತಾ ಸಮಾಜದ ವೃದ್ಧಾಶ್ರಮದ ಹಿರಿಯರಿಗೆ ಹಣ್ಣು - ಹಂಪಲು ವಿತರಣೆ ನಡೆಯಲಿದೆ. ಸಂಜೆ 6 ಗಂಟೆಗೆ ದಿನೇಶ್ ಕೆ . ಶೆಟ್ಟಿ ಸ್ವಗೃಹದ ಮುಂದೆ ವಿಕಲಚೇತನರಿಗೆ ವ್ಹೀಲ್ ಚೇರ್ ವಿತರಣೆ ವಿತರಣೆ ಹಮ್ಮಿಕೊಳ್ಳಲಾಗಿದೆ.

## ನಗರದಲ್ಲಿ ಇಂದು ಜನಸ್ಪಂದನ ಸಭೆ

ಕೋವಿಡ್ ಕಾರಣದಿಂದ ಸ್ಥಗಿತಗೊಂಡಿದ್ದ ಜನಸ್ಪಂದನ ಸಭೆಯನ್ನು ಪುನರಾರಂಭಿಸಲಾಗುವುದೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ. ಜಿಲ್ಲಾಡಳಿತ ಭವನದಲ್ಲಿ ಇಂದು ಜನಸ್ಪಂದನ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಪ್ರತಿವಾರಕ್ಕೆ ಬದಲಾಗಿ ಪ್ರತಿ ಹದಿನೈದು ದಿನಗಳಿಗೊಮ್ಮೆ ಜನಸ್ಪಂದನ ಸಭೆ ನಡೆಯಲಿದೆ.

## ರಾಣೇಬೆನ್ನೂರು : ಸಾಮೂಹಿಕ ವಿವಾಹ

ರಾಣೇಬೆನ್ನೂರು, ಮಾ. 16- ದಿ.ನೀಲಮ್ಮ ದಿ.ಶಂಕ್ರಪ್ಪ ಮಹದೇವಪ್ಪ ಗೌಡಶಿವಣ್ಣ ನವರ ಅವರ ಸ್ಮರಣಾರ್ಥ ಇವರ ಮಗನಾದ ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡ ಶಿವಣ್ಣನವರ ಹಾಗೂ ಅಭಿಮಾನಿ ಬಳಗದ ವತಿಯಿಂದ 101 ಜೊತೆ ಉಚಿತ ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವವನ್ನು ಬರುವ 28ರಂದು ನಗರದ ಎರೇಕುಪ್ಪಿ ರಸ್ತೆಯಲ್ಲಿ ಏರ್ಪಡಿಸಲಾಗಿದೆ.

ಮದುವೆಯಾಗಲು ಇಚ್ಛಿಸುವರು ಬರುವ ಏಪ್ರಿಲ್ 10ರೊಳಗಾಗಿ ತಮ್ಮ ಹೆಸರು ನೋಂದಾಯಿಸಬೇಕು. ವಿವರಕ್ಕೆ ಸಂಪರ್ಕಿಸಿ : 7019366433, 9902361021, 9916487175.

# ಮಲೇಬೆನ್ನೂರು-ಜಿಗಳಿ ರಸ್ತೆಗೆ ಕೊನೆಗೂ ಮುಕ್ತಿ : ಏಪ್ರಿಲ್‌ನಲ್ಲಿ ಕಾಮಗಾರಿ




ಮಲೇಬೆನ್ನೂರು, ಮಾ.16- ಕಳೆದ ಅನೇಕ ವರ್ಷಗಳಿಂದ ಅಭಿವೃದ್ಧಿ ಕಾಣದೆ ದುರಸ್ತಿಯಲ್ಲಿದ್ದ ಮಲೇಬೆನ್ನೂರು-ಜಿಗಳಿ ರಸ್ತೆಗೆ ಕೊನೆಗೂ ಮುಕ್ತಿ ಲಭಿಸಿದೆ. ಪಿಡಬ್ಲ್ಯೂಡಿ ಇಲಾಖೆಯ ಎಸ್‌ಹೆಚ್‌ಡಿಪಿ ಯೋಜನೆಯಡಿ 4.75 ಕೋಟಿ ರೂ. ಅನುದಾನದಲ್ಲಿ ಮಲೇಬೆನ್ನೂರಿನಿಂದ ಜಿಗಳಿ ಸಂಪರ್ಕ ಕಲ್ಪಿಸುವ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ ಪಡಿಸಲು ಕೈಗೆತ್ತಿಕೊಳ್ಳಲಾಗಿದೆ.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂ ಕಿನ ವಿರೂಪಾಕ್ಷಪ್ಪ ಬಳೆ ಎಂಬ ಗುತ್ತಿಗೇ ದಾರರಿಗೆ ಈ ರಸ್ತೆ ಅಭಿವೃದ್ಧಿ ಕಾಮಗರಿಯ ಟೆಂಡರ್ ಆಗಿದ್ದು, ಎಪ್ರಿಲ್‌ನಲ್ಲಿ ಕಾಮಗಾರಿ ಆರಂಭವಾಗುವುದೆಂದು ಪಿಡಬ್ಲ್ಯೂಡಿ ಇಂಜಿನಿಯರ್ ಬಿ.ಜಿ. ಶಿವರುದ್ರಪ್ಪ 'ಜನತಾವಾಣಿ' ಗೆ ತಿಳಿಸಿದ್ದಾರೆ.

ಇದಲ್ಲದೆ, ಕೆ.ಎನ್ ಹಳ್ಳಿಯಿಂದ ಕೊಕ್ಕನೂರು - ಜಿ.ಟಿ. - ಕಟ್ಟೆ ಮೂಗಿನಗೊಂದಿ ಮಾರ್ಗದ ರಸ್ತೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಕೂಡಾ ಇವರಿಗೆ ಆಗಿದ್ದು, ಆ ಕಾಮಗಾರಿ ಕೂಡಾ ಎಪ್ರಿಲ್‌ನಲ್ಲಿಯೇ ಪ್ರಾರಂಭವಾಗಲಿದೆ. ಎಂದು ಶಿವರುದ್ರಪ್ಪ ಮಾಹಿತಿ ನೀಡಿದರು.

ಮಲೇಬೆನ್ನೂರು-ಜಿಗಳಿ ರಸ್ತೆ ಗುಂಡಿಗಳಿಂದ ಕೂಡಿದ್ದು ನಿತ್ಯ ಸಂಚರಿಸುವ ವಾಹನ ಸವಾರರು ಶಾಸಕರಿಗೆ, ಸಂಸದರಿಗೆ ಹಿಡಿ ಶಾಪ ಹಾಕುತ್ತಿದ್ದರು. ಈ ಇಬ್ಬರ ಪ್ರಯತ್ನದಿಂದಾಗಿ ಕೊನೆಗೂ ಈ ರಸ್ತೆಗೆ ಮುಕ್ತಿ ಸಿಕ್ಕಿರುವುದರಿಂದ ರಸ್ತೆ ಪ್ರಯಾಣಿಕರು ನಿಟ್ಟುಸಿರು ಬಿಡುವಂತಾಗಿದೆ.

ಡಾ.ವೈ. ನಾಗಪ್ಪವರು ಶಾಸಕರಾಗಿದ್ದ ಸಂದರ್ಭದಲ್ಲಿ ಮಲೇಬೆನ್ನೂರಿನಿಂದ ಸಿರಿಗೆರೆವರೆಗೆ ಈ ರಸ್ತೆ ಅಭಿವೃದ್ಧಿಗೊಂಡಿತ್ತು. ನಂತರ ಅಲ್ಲಿಂದ ಇಲ್ಲಿಯವರೆಗೆ ಸುಮಾರು 18 ವರ್ಷಗಳ ರಸ್ತೆ ಅಭಿವೃದ್ಧಿ ಕಾಣದೆ ನೆನೆಗುದಿಗೆ ಬಿದ್ದಿತ್ತು.

ಶಾಸಕ ಎಸ್.ರಾಮಪ್ಪ ಅವರು ಕಳೆದ ವರ್ಷ ಜಿಗಳಿಯಿಂದ ಮಲವಟ್ಟಿ ಸಮೀಪದವರೆಗೆ 4 ಕೋಟಿ ರೂ. ವೆಚ್ಚದಲ್ಲಿ ಸುಮಾರು 1.5 ಕಿ.ಮೀ ರಸ್ತೆಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಅಲ್ಲಿಂದ ಸಿರಿಗೆರೆ ಕ್ರಾಸ್‌ವರೆಗಿನ ರಸ್ತೆ ಅಭಿವೃದ್ಧಿಗೂ ಸಂಸದರು ಶಾಸಕರು ಈ ವರ್ಷದಲ್ಲೇ ಅನುದಾನ ಬಿಡುಗಡೆ ಮಾಡಿಸುವಂತೆ ಈ ಭಾಗದ ಜನರು ಒತ್ತಾಯಿಸಿದ್ದಾರೆ.

# ಸಾಮಾಜಿಕ ನ್ಯಾಯ ಕೇಳುವುದು ತಪ್ಪಾ ?

## ರಾಜನಹಳ್ಳಿ ಶ್ರೀಗಳ ಧರಣಿ ಸತ್ಯಾಗ್ರಹದಲ್ಲಿ ಡಾ. ಜಿ.ಪರಮೇಶ್ವರ್ ಪ್ರಶ್ನೆ




ಬೆಂಗಳೂರು, ಮಾ.16- ನಿವೃತ್ತ ನ್ಯಾಯಾಧೀಶ ನಾಗ ಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವು ಬುಧವಾರ 35ನೇ ದಿನಕ್ಕೆ ಕಾಲಿಟ್ಟಿದೆ.

ಈ ದಿನದ ಧರಣಿಯಲ್ಲಿ ಪಾಲ್ಗೊಂಡಿದ್ದ ಮಾಜಿ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಮಾತನಾಡಿ, ಸಾಮಾಜಿಕ ನ್ಯಾಯಕ್ಕಾಗಿ ಶ್ರೀಗಳು ಮಾಡುತ್ತಿರುವ ಹೋರಾಟಕ್ಕೆ ನಮ್ಮ ಬೆಂಬಲವಿದ್ದು, ಸಂವಿಧಾನಬದ್ಧ ಹಕ್ಕಿಗಾಗಿ ಶ್ರೀಗಳು 35 ದಿನಗಳಿಂದ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರೂ ರಾಜ್ಯ ಸರ್ಕಾರ ಈ ಬಗ್ಗೆ ಇದುವರೆಗೂ ಸ್ಪಂದಿಸದಿರುವುದು ಬಹಳ ಬೇಸರದ ಸಂಗತಿಯಾಗಿದೆ.

ಸಾವಿರಾರು ವರ್ಷಗಳಿಂದ ಸಮಾಜವನ್ನು ವರ್ಗೀಕರಣ ಮಾಡುತ್ತಾ ಬಂದಿದ್ದು, ಒಂದು ವರ್ಗವನ್ನು ಹೊರಗಿಟ್ಟು ಅವರಿಂದ ದುಡಿಸಿಕೊಂಡು ಬದುಕುವುದು ಇಂದಿನ ಆಧುನಿಕ ಯುಗದಲ್ಲೂ ಮುಂದುವರೆಯಬೇಕೆಂಬುದು ಯಾವ ನ್ಯಾಯ ಮತ್ತು ಸಮಾನತೆಯಿಂದ ಇರಬೇಕೆಂದು ಕೇಳುವುದು ತಪ್ಪಾ ಎಂದು ಪರಮೇಶ್ವರ್ ಪ್ರಶ್ನಿಸಿದರು.

ಮೂಲ ನಿವಾಸಿ ಮಹಾ ಒಕ್ಕೂಟದ ಅಧ್ಯಕ್ಷ ಜಿಗಣಿ ಶಂಕರ್, ದಲಿತ ಮುಖಂಡ ಮಾರಸಂದ್ರ ಮುನಿಯಪ್ಪ, ಸತೀಶ್ ಜಾರಕಿಹೊಳಿ ಅವರ ಪುತ್ರ ರಾಹುಲ್ ಮತ್ತು ಪುತ್ರಿ ಪ್ರಿಯಾಂಕ, ಮುಖಂಡರಾದ ಕೆ.ಎಸ್.ಮೃತ್ಯುಂಜಯಪ್ಪ, ಹರ್ತಿಕೋಟೆ ವೀರೇಂದ್ರ ಸಿಂಹ, ನಿವೃತ್ತ ಎಸಿಪಿ ಪಂಪಾಪತಿ, ಸಿರಿಗೆರೆ ತಿಪ್ಪೇಶ್, ಬೆಳ್ಳಿ ಗಂಗಾಧರ್, ಬಸವರಾಜ ನಾಯ್ಕ, ಶುಭ ವೇಣು ಗೋಪಾಲ್, ವಕೀಲ ಅನಂತ್‌ನಾಯ್ಕ, ಸಣ್ಣ ನಾಯಕರು ಸೇರಿದಂತೆ ವಿವಿಧ ಜಿಲ್ಲೆಗಳ ಮುಖಂಡರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಜೇಮ್ಸ್ ಬಿಡುಗಡೆ 'ಅಪ್ಪು ಉತ್ಸವ'




ದಾವಣಗೆರೆ, ಮಾ.16- ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿ ಸಂಘಗಳ ಒಕ್ಕೂಟ, ಡಾ.ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ, ರಾಜರತ್ನ ಪುನೀತ್ ರಾಜ್ ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಜೇಮ್ಸ್ ಚಿತ್ರ ಬಿಡುಗಡೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಪ್ಪು ಉತ್ಸವ ಆಚರಿಸಲಾಗುವುದು ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ಯೋಗೀಶ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 17ರ ಗುರುವಾರ ಪುನೀತ್ ರಾಜ್ ಕುಮಾರ್ ಅವರ 'ಜೇಮ್ಸ್' ಚಿತ್ರ ಬಿಡುಗಡೆಯಾಗಲಿದ್ದು, ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುವುದು.

ಪುನೀತ್ ಅವರ 47ನೇ ಹುಟ್ಟುಹಬ್ಬದ ಪ್ರಯುಕ್ತ 47 ಆಟೋಗಳ ಮೇಲೆ ಅಪ್ಪು ಅವರ 47 ಫ್ಲೆಕ್ಸ್‌ಗಳ ಮೆರವಣಿಗೆಯು ನಿಟುವಳ್ಳಿ ದುರ್ಗಾಂಬಿಕಾ ದೇವಸ್ಥಾನದಿಂದ ವಸಂತ ಚಿತ್ರಮಂದಿರದವರೆಗೆ ನಡೆಯಲಿದೆ. ನಂತರ ಪುನೀತ್ ಕಟೌಟ್‌ಗೆ ಪುಷ್ಪಾರ್ಚನೆ, ಕೇಕ್ ಕತ್ತರಿಸಿ, ಸಿಹಿ ಹಂಚುವ ಕಾರ್ಯಕ್ರಮ ನಡೆಯಲಿದೆ ಎಂದರು.

ಭಾಗ್ಯದೇವಿ ವೈ., ಹರೀಶ್ ಜಿ., ಎಂ.ಎಸ್. ಶ್ರೀನಿವಾಸ ಗುಮ್ಮನೂರು, ರಾಜೇಶ್, ಎನ್. ನಾಗರಾಜ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ವಿದ್ಯಾನಗರದಲ್ಲಿ ಕರ್ನಾಟಕ ಬ್ಯಾಂಕ್ ಕೆಬಿಎಲ್ ಈ ಲಾಬಿ ಶಾಖೆ ಉದ್ಘಾಟನೆ



ದಾವಣಗೆರೆ, ಮಾ.16- ಕರ್ಣಾಟಕ ಬ್ಯಾಂಕ್‌ನ 876ನೇ ಶಾಖೆ ಹಾಗೂ ಕೆಬಿಎಲ್ ಈ ಲಾಬಿ ಶಾಖೆಯನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬಿಳಗಿ ವಿದ್ಯಾನಗರದಲ್ಲಿ ಉದ್ಘಾಟಿಸಿದರು. ಶಿವಮೊಗ್ಗ ರೀಜನಲ್ ಶಾಖೆಯ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಹಯವದನ ಉಪಾಧ್ಯಾಯ ಹಾಗೂ ಚೀಫ್ ಮ್ಯಾನೇಜರ್ ರಾಘವೇಂದ್ರ ಉಡುಪ, ಜಿಲ್ಲೆಯ ಲೀಡ್ ಬ್ಯಾಂಕ್ ಮ್ಯಾನೇಜರ್ ಶುಶ್ರುತ್ ಶಾಸ್ತ್ರಿ, ಕೆಬಿಎಲ್ ಮೇನ್ ಬ್ರಾಂಚ್‌ನ ಸೀನಿಯರ್ ಮ್ಯಾನೇಜರ್ ವಿನೋದ್ ತೋರಗಲ್ ದಾವಣಗೆರೆ, ವಿದ್ಯಾನಗರ ಶಾಖೆಯ ಮುಖ್ಯಸ್ಥ ರಮೇಶ್ ಮತ್ತು ಇತರರು ಉಪಸ್ಥಿತರಿದ್ದರು.

## ಆರ್‌ಟಿಒ ಕಚೇರಿ ಮುಚ್ಚುವ ಪ್ರಸ್ತಾಪವಿಲ್ಲ : ಸಚಿವ ಶ್ರೀರಾಮುಲು

ಬೆಂಗಳೂರು, ಮಾ. 16 - ಸಾರಿಗೆ ಇಲಾಖೆಯಿಂದ ಸಾರ್ವಜನಿಕರಿಗೆ ಒಟ್ಟು 30 ಆನ್‌ಲೈನ್ ಸೇವೆಗಳನ್ನು ಕಲ್ಪಿಸಲಾಗುತ್ತಿದ್ದು, ಸದ್ಯಕ್ಕೆ ಆರ್‌ಟಿಒ ಮತ್ತು ಎಆರ್‌ಟಿಒ ಕಚೇರಿಗಳನ್ನು ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಸಾರಿಗೆ ಸಚಿವ ಶ್ರೀರಾಮುಲು ವಿಧಾನಸಭೆಯಲ್ಲಿ ಇಂದು ಸ್ಪಷ್ಟಪಡಿಸಿದರು. ಸೋಮನಗೌಡ ಬಿ.ಪಾಟೀಲ್ ಪರವಾಗಿ ಶಿವರಾಜ್ ಪಾಟೀಲ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಚಾಲನಾ ಪರವಾನಗಿ, ವಾಹನಗಳ ನೋಂದಣಿ ಸೇರಿದಂತೆ 30 ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸುತ್ತಿದ್ದೇವೆ. ಈ ಕಚೇರಿಗಳನ್ನು ಮುಚ್ಚುವ ಪ್ರಶ್ನೆಯೇ ಇಲ್ಲ ಎಂದರು.

ಯಾವುದೇ ಭಾಗದಲ್ಲಿ ಆರ್‌ಟಿಒ ಕಚೇರಿ ತೆರೆಯಬೇಕಾದರೆ ಕೆಲವೊಂದು ಮಾನದಂಡಗಳು ಇರಬೇಕು ಜನಸಂಖ್ಯೆ, ದೈನಂದಿನ ವಹಿವಾಟು ಎಲ್ಲವನ್ನೂ ನೋಡಿಕೊಂಡು ಅಗತ್ಯವಿದ್ದರೆ ಕಚೇರಿಗಳನ್ನು ತೆರೆಯುತ್ತೇವೆ ಎಂದರು.





ಮೂರನೇ ವರ್ಷದ ಸವಿನೆನಪು



ಶ್ರೀಮತಿ ದಿ|| ಎಂ.ಎಂ. ಸೌಭಾಗ್ಯ ಲಕ್ಷ್ಮಿ
ನೀವು ನಮ್ಮನ್ನಗಲಿ ಮೂರು ವರ್ಷಗಳು ಸಂದವು, ಸದಾ ನಿಮ್ಮ ಸ್ಮರಣೆಯಲ್ಲಿರುವ...
ಶ್ರೀಮತಿ ವಿದ್ಯಾಶ್ರೀ ಪಿ ಮತ್ತು ಎಂ.ಎಂ. ರವಿಚಂದ್ರ
ಶ್ರೀಮತಿ ಎಂ.ಎಂ. ಛಾಯಾ ಮತ್ತು ರಜತ್ ಬಿ.ಆರ್
ಶ್ರೀಮತಿ ಎಂ.ಎಂ. ರಾಜಲಕ್ಷ್ಮಿ ಮತ್ತು ಶ್ರೀ ಪವನಕುಮಾರ್
ಶ್ರೀಮತಿ ಎಂ.ಎಂ. ಸರಸ್ವತಿ ಮತ್ತು ಶ್ರೀ ರುದ್ರೇಶ್
ಮೊಮ್ಮಕ್ಕಳಾದ: ಅರ್ವಿ ಎಂ.ಆರ್., ರಿಷನ್, ವಿಷ್ಣು ಬಿ.ಆರ್., ವಿವಾನ್ ಪಿ.ಎಸ್., ಸಾಯಿ ಪ್ರಣವ್ ಆರ್.ಬಿ.
**ಎಂ.ಆರ್. ಮಂಜುನಾಥ್ ಶೆಟ್ಟಿ & ಸನ್ಸ್**
667/1, ಕೆನರಾ ಬ್ಯಾಂಕ್ ಎದುರು, ಕೆ.ಆರ್. ರಸ್ತೆ, ದಾವಣಗೆರೆ-1. ಫೋ. : 98442 14803


## ಕಲ್ಲಿನಿಂದ ಜಜ್ಜಿ ಯುವಕನ ಹತ್ಯೆ

**ಹರಿಹರ**

ಹರಿಹರ, ಮಾ. 16 - ನಗರದ ಗಾಂಧಿ ಮೈದಾನದ ಮುಂಭಾಗದ ಕ್ರೀಡಾ ಇಲಾಖೆಯ ಮಳಿಗೆಗಳ ಮುಂಭಾಗ ಗಂಗನರಸಿ ಗ್ರಾಮದ ಗಿರೀಶ್ (20) ತಲೆಯನ್ನು ಕಲ್ಲಿನಿಂದ ಜಜ್ಜಿ ಕೊಲೆ ಮಾಡಲಾಗಿದೆ.

ಮೊಬೈಲ್ ಅಂಗಡಿ ಎದುರು ತಡರಾತ್ರಿ ಹತ್ಯೆ ಮಾಡಲಾಗಿದೆ. ಬೆಳಿಗ್ಗೆ ಸಾರ್ವಜನಿಕರು ಈ ಕುರಿತ ಮಾಹಿತಿಯನ್ನು ಪೊಲೀಸರಿಗೆ ತಿಳಿಸಿದ್ದಾರೆ.

ಮೃತ ವ್ಯಕ್ತಿಯ ತಲೆಗೆ ಬಲವಾದ ಪೆಟ್ಟು ಬಿದ್ದು ಸಾವು ಸಂಭವಿಸಿದೆ. ಸಮೀಪದಲ್ಲೇ ಸೈಜು ಕಲ್ಲು, ಕುಡಿಯುವ ನೀರಿನ ಬಾಟಲಿ ಹಾಗೂ ಬಿಯರ್ ಬಾಟಲಿ ಪತ್ತೆಯಾಗಿದೆ.

ಪಕ್ಕದಲ್ಲೇ ಬಾರ್ ಇದ್ದು, ಮದ್ಯಸೇವನೆ ನಂತರ ಗಲಾಟೆಯಾಗಿ ಸಾವು ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಮೃತ ವ್ಯಕ್ತಿಯ ಮರಣೋತ್ತರ ಪರೀಕ್ಷೆಗೆ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ.

ಶ್ವಾನ ದಳದ ಮೂಲಕ ಪರಿಶೀಲನೆ ನಡೆಸಿದಾಗ, ಶ್ವಾನಗಳು ಕೆಲವು ವೃತ್ತಗಳಲ್ಲಿ ಸಂಚರಿಸಿ ಬಸ್ ನಿಲ್ದಾಣಕ್ಕೆ ಹೋಗಿ ನಿಂತಿವೆ.

ಸ್ಥಳಕ್ಕೆ ದಾವಣಗೆರೆ ಜಿಲ್ಲೆ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಡಿವೈಎಸ್ಪಿ ಬಸವರಾಜ್, ಸಿಪಿಐ ಸತೀಶ್ ಕುಮಾರ್, ಪಿಸಿಐ ಸುನಿಲ್ ಬಸವರಾಜ್, ಗುತ್ತೂರು ಗ್ರಾಮಾಂತರ ಠಾಣೆಯ ಪಿಎಸ್‌ಐ ವೀರಬಸಪ್ಪ ಕುಸಲಾಪುರ ಇತರರು ಭೇಟಿ ನೀಡಿದ್ದಾರೆ.

# ಪದ್ಧತಿ ಪ್ರಕಾರವೇ ನೆರವೇರಿದ ಮಹಾಪೂಜೆ



(1ನೇ ಪುಟದಿಂದ) ನಾಮಸ್ಮರಣೆ ಮಾಡುತ್ತಾ ಹರಕೆಯಂತೆ, ತಲೆಯ ಮೇಲೆ ದೀಪ ಹೊತ್ತವರು, ತುಂಬಿದ ಕೊಡವನ್ನು ತಲೆ ಮೇಲೆ ಹೊತ್ತವರು, ಬೇವಿನ ಉಡುಗೆ ಧರಿಸಿದವರು, ಉರುಳು ಸೇವೆ ಮತ್ತು ದೀಡು ನಮಸ್ಕಾರ ಹಾಕುವವರು ಸಾಗರೋಪಾದಿಯಲ್ಲಿ ದೇವಸ್ಥಾನಕ್ಕೆ ತೆರಳುತ್ತಿದ್ದ ದೃಶ್ಯ ನೋಡಿದರೆ, ಭಕ್ತರು ಅಮ್ಮನ ಮೇಲಿಟ್ಟಿರುವ ಅಪಾರ ನಂಬಿಕೆಗೆ ಸಾಕ್ಷಿ ಎನ್ನುವಂತಿತ್ತು.

ದೇವಸ್ಥಾನದ ಸುತ್ತ-ಮುತ್ತ ಎಲ್ಲಿ ನೋಡಿದರೂ ಭಕ್ತಾದಿಗಳೇ ತುಂಬಿದ್ದರು. ಬೇವಿನ ಸೊಪ್ಪಿನ ರಾಶಿ ಮತ್ತು ಬೇವಿನುಡಿಗೆ, ದೀಡು ನಮಸ್ಕಾರ ಹಾಕುವ ಭಕ್ತರು ಬಿಟ್ಟ ಬಟ್ಟೆಗಳ ರಾಶಿಯೇ ಅಲ್ಲಿ ಕಂಡು ಬರುತ್ತಿತ್ತು.

ನಿನ್ನೆಯಂತೆ ಇಂದೂ ಸಹ ಅಮ್ಮನ ದರ್ಶನಕ್ಕೆ ಜನ ಸಾಗರವೇ ಹರಿದುಬಂದಿತ್ತು. ಬಿಸಿಲು ಹೆಚ್ಚಾಗುವ ಕಾರಣದಿಂದ ಬಹುತೇಕ ಜನರು ನಸುಕಿನಿಂದಲೇ ದೇವಸ್ಥಾನಕ್ಕೆ ಬಂದು ಹರಕೆ ಸೇವೆ ಸಲ್ಲಿಸಲು ಮುಂದಾಗಿದ್ದುದನ್ನು ಕಾಣಬಹುದಾಗಿತ್ತು. ಆದರೆ ಬಿಸಿಲು ಏರುತ್ತಾ ಬಂದರೂ ಭಕ್ತರ ಹರವು ಕಡಿಮೆಯಾಗಿರಲಿಲ್ಲ.

ನಗರ, ಅದರಲ್ಲಿಯೂ ಹಳೇ ಭಾಗದ ಜನ ಹಬ್ಬವನ್ನು ಆಚರಿಸುವ ಜೊತೆಗೆ ಅಮ್ಮನಿಗೆ ಕುರಿ, ಕೋಳಿಗಳ ಬಲಿ ನೀಡಿ ಮನೆಗೆ ಬಂದಂತಹ ನೆಂಟರು ಮತ್ತು ಬಂಧು ಮಿತ್ರರಿಗೆ ಊಟದ ವ್ಯವಸ್ಥೆ ಮಾಡಿದ್ದರು. ಇದಕ್ಕಾಗಿ ಬಹಳಷ್ಟು ಕಡೆ ಶಾಮಿಯಾನ ಹಾಕಲಾಗಿತ್ತು. ಹಳೇ ಊರ ತುಂಬಾ ಮಸಾಲೆಯದೇ ಘಮಘಮ.

ಮಸಾಲೆ ರುಬ್ಬುವ ಮಳಿಗೆಗಳಲ್ಲಿ ಸರತಿ ಸಾಲು ದೊಡ್ಡದಿತ್ತು. ಮಾಂಸದ ಅಂಗಡಿಗಳಂತೂ ಜನರಿಂದ ತುಂಬಿ ತುಳುಕುತ್ತಿದ್ದವು. ಕುರಿ ಹಲಾಲ್ ಮಾಡುವವರು, ಚರ್ಮ ಖರೀದಿಸುವವರು, ಕುರಿ ತಲೆ ಸುಟ್ಟು ಕೊಡುವ ಜನರ ವಹಿವಾಟು ಜೋರಾಗಿಯೇ ನಡೆದಿತ್ತು. ಮದ್ಯದಂಗಡಿಗಳೂ ಭರ್ತಿಯಾಗಿದ್ದವಲ್ಲದೇ ಹೊರಗಡೆ ಶಾಮಿಯಾನದ ವ್ಯವಸ್ಥೆಯನ್ನೂ ಸಹ ಬಾರ್‌ನವರು ಮಾಡಿದ್ದರು.

ದೇವಸ್ಥಾನ ಸಮಿತಿಯವರು ಸಾಕಷ್ಟು ಅಗತ್ಯ ಸೌಲಭ್ಯ ಕಲ್ಪಿಸಿದ್ದರು. ಅಲ್ಲದೇ ಪೊಲೀಸ್ ಇಲಾಖೆ ಸೂಕ್ತ ಭದ್ರತೆ ಮತ್ತು ವಾಹನಗಳ ಪಾರ್ಕಿಂಗ್ ವ್ಯವಸ್ಥೆಯಿಂದಾಗಿ ಭಕ್ತಾಧಿಗಳಿಗೆ ನೂಕು ನುಗ್ಗಲಿನ ಪ್ರಮೇಯ ಈ ಬಾರಿ ಬರಲಿಲ್ಲ ಎಂಬ ಮಾತುಗಳು ಕೇಳಿ ಬಂದವು.

# ಅಖಂಡ ಕರ್ನಾಟಕ ರೈತ ಸಂಘದ ನಿಯೋಗದಿಂದ ಶೀಘ್ರ ಸಿಎಂ ಭೇಟಿ




ಹೊನ್ನಾಳಿ,ಮಾ.16- ಮಾರ್ಚ್ ತಿಂಗಳ ಒಳಗಾಗಿ ರಾಜ್ಯ ರೈತ ಸಂಘವು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ರಾಜ್ಯದ ರೈತರು ಎದುರಿಸುತ್ತಿರುವ ಅನೇಕ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದು ಚರ್ಚಿಸುವ ಮೂಲಕ ಪರಿಹಾರ ಕಂಡುಕೊಳ್ಳಲು ಪ್ರಯತ್ನ ನಡೆಸುವುದಾಗಿ ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಹಾವೇರಿ ಸಿದ್ದನಗೌಡ ಪಾಟೀಲ್ ತಿಳಿಸಿದ್ದಾರೆ.

ಮಂದಿರದಲ್ಲಿ 7 ಜಿಲ್ಲೆಗಳ ರೈತ ಪ್ರಮುಖ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೈತರು ಎದುರಿಸುತ್ತಿರುವ ಅತಿಮುಖ್ಯ ಸಮಸ್ಯೆಗಳಾದ ನಮ್ಮ ಹೊಲ - ನಮ್ಮ ರಸ್ತೆ, ರೈತನಿಗೆ ಬಗರ್‌ಹುಕ್ಕುಂ ಸಾಗುವಳಿ ಪತ್ರ ನೀಡುವ, ತಾಲ್ಲೂಕುಗಳ ಕೆರೆ ಅಭಿವೃದ್ಧಿ, ರೈತರ ಜಮೀನಿನ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ, ರೈತರ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಗೊಳಿಸುವ, ಇನ್ನಿತರೆ ವಿಷಯಗಳ ಬಗ್ಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು ಎಂದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ದೊಡ್ಡೇರಹಳ್ಳಿ ನಾಗರಾಜಪ್ಪ ಮಾತನಾಡಿದರು. ರೈತ ಸಂಘದ ರಾಜ್ಯ ಕಾರ್ಯದರ್ಶಿ ಚಿತ್ರದುರ್ಗದ ಸೋಮನಗುದ್ದು ರಂಗಸ್ವಾಮಿ, ರಾಜ್ಯ ಪ್ರ.ಕಾ ಮಂಡ್ಯ ಸುಧೀರ್ ಕುಮಾರ್, ರಾಜ್ಯ ಸಂ. ಕಾರ್ಯದರ್ಶಿ ಹಡಗಲಿ ಎಂ. ಗಂಗಾಧರ್, ನಂದಿ ತಾವರೆ ಎಂ. ಮುರುಗೇಂದ್ರಯ್ಯ, ರಾಜ್ಯ ಕಾರ್ಯದರ್ಶಿ ವಿಜಯಪುರ ಅರವಿಂದ ಕುಲಕರ್ಣಿ, ರಾಜ್ಯ ಉಪಾಧ್ಯಕ್ಷ ಧಾರವಾಡ ಯಡಿ ಒಡೆಯರ್, ಹೊನ್ನಾಳಿ ತಾಲ್ಲೂಕು ಅಧ್ಯಕ್ಷ ಅರಬಗಟ್ಟೆ ಕೆ., ಸಿ ಬಸಪ್ಪ, ಹಿರೇಮಠ ಬಸಣ್ಣ, ಸುಂಕದಕಟ್ಟೆ ಕರಿಬಸಪ್ಪ, ಹೊಳೆಹರಳಹಳ್ಳಿ ಬಸವರಾಜಪ್ಪ ಹಾಗೂ ಇನ್ನಿತರೆ ರೈತ ಮುಖಂಡರು ಇದ್ದರು.

## ಸಣ್ಣ ಮಠಗಳಿಗೂ ಅನುದಾನ ನೀಡಿ

### ಸರ್ಕಾರಕ್ಕೆ ಶ್ರೀ ಸಿದ್ಧಲಿಂಗೇಶ್ವರ ಸ್ವಾಮೀಜಿ ಮನವಿ



ಮಲೇಬೆನ್ನೂರು, ಮಾ. 16- ವಿನಾಯಕ ನಗರ ಕ್ಯಾಂಪಿನ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಕರ್ನಾಟಕ ಸರ್ಕಾರದ ವೀರಶೈವ ಅಭಿವೃದ್ಧಿ ನಿಗಮ, ಮಂಡಳಿಯ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ ಅವರನ್ನು ನಿನ್ನೆ ಭೇಟಿ ಮಾಡಿ, ರಾಜ್ಯದಲ್ಲಿರುವ ಹಲವಾರು ಸಣ್ಣ ಪುಟ್ಟ ಮಠಗಳನ್ನು ಗುರುತಿಸಿ, ಅವುಗಳ ಅಭಿವೃದ್ಧಿಗೆ ಅನುದಾನ ನೀಡುವಂತೆ ಸರ್ಕಾರದ ಗಮನಕ್ಕೆ ತರಬೇಕೆಂದು ಮನವಿ ಮಾಡಿದರು.

## ಕೊರೊನಾ ಪೂರ್ಣ ಹೋಗಿಲ್ಲ

(1ನೇ ಪುಟದಿಂದ) ಕೇಂದ್ರ ಸರ್ಕಾರ ಈ ಲಸಿಕೆ ಮೂಲಕ ಪೋಷಕರ ಆತಂಕ ದೂರ ಮಾಡುತ್ತಿದೆ. 12 ರಿಂದ 14 ವರ್ಷದ ಮಕ್ಕಳು ಈ ಲಸಿಕೆ ತೆಗೆದು ಕೊಂಡರೆ ಕೊರೊನಾ ವಿರುದ್ಧ ಹೋರಾಡಲು ಶಕ್ತಿ ಪಡೆಯಬಹುದು. ರಾಜ್ಯದಲ್ಲಿ 20 ಲಕ್ಷ ಮಕ್ಕಳಿಗೆ ಈ ಲಸಿಕೆ ನೀಡಲಾಗುವುದು. ಸರ್ಕಾರದ ಕ್ರಮಗಳಿಗೆ ಪೋಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಕೋವಿಡ್ ಲಸಿಕೆ ಪಡೆದವರು ಕೂಡ ಮುಂಜಾಗ್ರತಾ ಕ್ರಮಗಳನ್ನು ಮರೆಯಬಾರದು, ಕೋವಿಡ್ ಸಂಪೂರ್ಣವಾಗಿ ಹೋಗಿಲ್ಲ, ಆದರೆ ಲಸಿಕಾಕರಣದಿಂದ ನಿಯಂತ್ರಣಕ್ಕೆ ಬಂದಿದೆ, ಈ ವಿಚಾರದಲ್ಲಿ ಸಾಗಬೇಕಾದ ಹಾದಿ ದೂರವಿದೆ. ಇನ್ನೂ ಹಲವು ಅಲೆಗಳು ಬರಬಹುದು ಎಂಬ ಆತಂಕವಿದೆ.

ಲಸಿಕಾಕರಣದಿಂದ ಅದೆಲ್ಲವನ್ನೂ ದೂರ ಮಾಡಬಹುದು. ಮಾಸ್ಕ್, ಭೌತಿಕ ಅಂತರದ ಮೂಲಕ ಮುಂಜಾಗ್ರತಾ ಕ್ರಮಗಳನ್ನು ಎಲ್ಲರೂ ಪಾಲಿಸಬೇಕು ಎಂದು ಹೇಳಿದರು.

0-12 ವರ್ಷದ ಒಳಗಿನ ಮಕ್ಕಳಿಗೂ ಮುಂದಿನ ದಿನಗಳಲ್ಲಿ ಲಸಿಕೆ ದೊರೆಯಲಿದೆ, ಎಲ್ಲವೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಸಂಶೋಧನೆಯಾಗಿ, ಅಧ್ಯಯನವಾಗಿ, ಪರವಾನಗಿ ತೆಗೆದುಕೊಂಡು ಜನರಿಗೆ ನೀಡಲಾಗುತ್ತಿದೆ, ಚೀನಾದ ಕೆಲವು ನಗರಗಳಲ್ಲಿ ಮತ್ತು ಕೆಲವು ದೇಶಗಳಲ್ಲಿ ಕೋವಿಡ್ ಹೆಚ್ಚಾದ ಬಗ್ಗೆ ಗಮನ ನೀಡಲಾಗಿದೆ ಎಂದವರು ತಿಳಿಸಿದರು.

# ಹಣಕಾಸು ಶಿಸ್ತು ಮೀರಿಲ್ಲ : ಸಿಎಂ ಬೊಮ್ಮಾಯಿ

(1ನೇ ಪುಟದಿಂದ) ಸರಾಗವಾಗಿ ಹರಿದುಬರುತ್ತಿದೆ. ಇನ್ನು ಕೆಲವೇ ದಿನಗಳಲ್ಲೇ ಮೊದಲಿನ ಪ್ರಗತಿಪರ ಸ್ಥಿತಿಗೆ ತಲುಪುತ್ತೇವೆ ಎಂದರು.

ಹಾಲು ಉತ್ಪಾದನೆ ಒಂದು ಪ್ರಮುಖ ಚಟುವಟಿಕೆಯಾಗಿದ್ದು, ರೈತರಿಗೆ ಸಾಕಷ್ಟು ವರಮಾನ ತಂದುಕೊಡಲಿದೆ, ಲಕ್ಷಾಂತರ ರೈತರು ಇದರ ಪ್ರಯೋಜನ ಪಡೆಯುತ್ತಿದ್ದು, ತಿಂಗಳಿಗೆ 20 ಸಾವಿರ ಕೋಟಿ ರೂ. ವಹಿವಾಟು ನಡೆಯುತ್ತಿದೆ. ಆರ್ಥಿಕ ಅಭಿವೃದ್ಧಿ ಮತ್ತು ಸ್ವಾವಲಂಬನೆ ಸಾಧಿಸಲು ಹಾಲು ಉತ್ಪಾದನೆಗಾಗಿಯೇ ಸರ್ಕಾರ ಹಾಲು ಉತ್ಪಾದಕ ಬ್ಯಾಂಕ್ ಸ್ಥಾಪನೆ ಮಾಡಲಿದೆ ಎಂದು ಅವರು ಘೋಷಿಸಿದರು.

ಇದಕ್ಕಾಗಿ ಸರ್ಕಾರ 100 ಕೋಟಿ ರೂ. ಅನುದಾನ ನೀಡಲಿದೆ, ಇತರರು ತಲಾ 1000 ರೂ. ಬಂಡವಾಳ ಠೇವಣಿ ಇಡಬೇಕು, ಇದನ್ನು ಸರಿಯಾಗಿ ನಿರ್ವಹಿಸಿದರೆ ಹಾಲು ಉತ್ಪಾದಕ ಬ್ಯಾಂಕ್ ಅಪೆಕ್ಸ್ ಬ್ಯಾಂಕ್ ಆಗಿ ಅಭಿವೃದ್ಧಿಯಾಗಲಿದೆ.

ಕೇಂದ್ರ ಸರ್ಕಾರದ ಯಶಸ್ವಿನಿ ಯೋಜನೆಯು ಅನೇಕರಿಗೆ ಲಾಭವಾಗುತ್ತಿತ್ತು. ತಾವು ಎಲ್ಲಿಗೆ ಭೇಟಿ ಕೊಟ್ಟರೂ ಜನ ಈ ಯೋಜನೆಯನ್ನು ಮರುಸ್ಥಾಪನೆ ಮಾಡಬೇಕೆಂಬ ಬೇಡಿಕೆ ಇಡುತ್ತಿದ್ದರು.

ಆಯುಷ್ಮಾನ್ ಭಾರತ್ ಯೋಜನೆಯಿದ್ದರೂ ಕೆಲವು ಆಸ್ಪತ್ರೆಗಳಿಗೆ ಹೋಗಲು ಅನೇಕ ದಾಖಲಾತಿಗಳನ್ನು ಕೇಳುತ್ತಿದ್ದರು. ಈಗ ಆಯುಷ್ಮಾನ್ ಭಾರತ್ ಯೋಜನೆ ಪ್ರಯೋಜನ ಪಡೆಯಲು ತೊಂದರೆಯಾಗದಂತೆ, ಯಶಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ ಪುನಃ ಅನುಷ್ಠಾನ ಮಾಡುವುದಾಗಿ ಪ್ರಕಟಿಸಿದರು.

ರಾಜ್ಯದ 93 ತಾಲ್ಲೂಕುಗಳನ್ನು ಅಪೇಕ್ಷಿತ ತಾಲ್ಲೂಕುಗಳು ಎಂದು ಘೋಷಿಸಲಾಗಿದೆ, 102 ತಾಲ್ಲೂಕುಗಳಲ್ಲಿ ಅಪೌಷ್ಟಿಕತೆ, 100 ತಾಲ್ಲೂಕುಗಳಲ್ಲಿ ಸರಾಸರಿ ಆರೋಗ್ಯ ಸ್ಥಿತಿ ಕಡಿಮೆಯಿದೆ. ಆರೋಗ್ಯ, ಶಿಕ್ಷಣ, ಪೌಷ್ಟಿಕ ಆಹಾರ ಎಲ್ಲರಿಗೂ ಸಿಗಬೇಕು, ಅದಕ್ಕಾಗಿ 3,000 ಕೋಟಿ ರೂ. ವೆಚ್ಚದಲ್ಲಿ ಅಪೇಕ್ಷಿತ ತಾಲ್ಲೂಕುಗಳನ್ನು ಅಭಿವೃದ್ಧಿಪಡಿಸಲಾಗುವುದು.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ರಾಜ್ಯದ 5 ನಗರಗಳಲ್ಲಿ ವಸತಿ ಸಮುಚ್ಚಯ ಯೋಜನೆ ಜಾರಿ ಮಾಡಲಾಗುವುದು.

ಕರ್ನಾಟಕ, ದೇಶದಲ್ಲೇ ಅತ್ಯಂತ ಪ್ರಗತಿಪರ ರಾಜ್ಯವಾಗಿದೆ, ಇನ್ನು ಮುಂದೆ ಎನ್‌ಐಟಿ, ಐಐಟಿ ಮಾದರಿಯಲ್ಲಿ ರಾಜ್ಯದಲ್ಲೂ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು 6 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಮೇಲ್ದರ್ಜೆಗೇರಿಸಲಾಗುವುದು, ಕೇಂದ್ರ ಸರ್ಕಾರದಲ್ಲಿರುವಂತೆ ಐಐಟಿ, ಎನ್‌ಐಟಿ ಮಾದರಿಯಲ್ಲಿ ಕೆಐಟಿ ಪ್ರಾರಂಭಿಸುವುದಾಗಿ ಅವರು ಹೇಳಿದರು.

ರಾಜ್ಯದಲ್ಲಿ ಬಂಡವಾಳ ಹೂಡುವ ಉದ್ಯಮಿಗಳಿಗೆ ಈಗಾಗಲೇ ಕೈಗಾರಿಕಾ ನೀತಿ ಜಾರಿ ಮಾಡಲಾಗಿದೆ, ಬಂಡವಾಳ ಹೂಡಿ, ಉದ್ಯಮ ಆರಂಭಿಸಿ, ಕೈಗಾರಿಕೆ ಸ್ಥಾಪಿಸಿ, ಯಾರು ಹೆಚ್ಚು ಉದ್ಯೋಗ ನೀಡುವವರೋ ಅವರಿಗೆ ತೆರಿಗೆ ವಿನಾಯಿತಿ ನೀಡಲಾಗುವುದು, ಇದಕ್ಕಾಗಿ ಉದ್ಯೋಗ ನೀತಿಯನ್ನು ಏಪ್ರಿಲ್‌ನಲ್ಲಿ ಜಾರಿ ಮಾಡುತ್ತೇವೆ.

ರಾಜ್ಯದಲ್ಲಿ ಶೀಘ್ರದಲ್ಲೇ ಸೆಮಿಕಂಡಕ್ಟರ್ ನೀತಿಯನ್ನೂ ಜಾರಿ ಮಾಡುತ್ತೇವೆ, ಕರ್ನಾಟಕದಲ್ಲೇ ಅತಿಹೆಚ್ಚು ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳಿವೆ, ಇದು ಜನಪರ ಸರ್ಕಾರ ಎನ್ನುವುದಕ್ಕೆ ಹಲವಾರು ದಿಟ್ಟ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ಸಮರ್ಥಿಸಿಕೊಂಡರು.

## ಹೋಳಿ ನಂತರ ಹಿಜಾಬ್ ಅರ್ಜಿಯ ವಿಚಾರಣೆ : ಸುಪ್ರೀಂ


ನವದೆಹಲಿ, ಮಾ. 16 - ಶಾಲಾ ಕೋಣೆಯ ಒಳಗೆ ಹಿಜಾಬ್ ಧರಿಸಲು ಅನುಮತಿ ನೀಡಬೇಕೆಂಬ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ತಳ್ಳಿ ಹಾಕಿರುವುದನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಯ ವಿಚಾರಣೆಯನ್ನು ಹೋಳಿ ರಜೆಯ ನಂತರ ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠದ ಎದುರು ಹಿಜಾಬ್ ವಿದ್ಯಾರ್ಥಿನಿಯರ ಪರವಾಗಿ ಅರ್ಜಿ ಸಲ್ಲಿಸಿದ ಹಿರಿಯ ವಕೀಲ ಸಂಜಯ್ ಹೆಗಡೆ, ಮುಂಬರುವ ಪರೀಕ್ಷೆಗಳ ಹಿನ್ನೆಲೆಯಲ್ಲಿ ತ್ವರಿತ ವಿಚಾರಣೆಗೆ ಮನವಿ ಮಾಡಿಕೊಂಡರು.

ಹಲವಾರು ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಬೇಕಿದೆ. ತ್ವರಿತ ವಿಚಾರಣೆ ನಡೆಸಬೇಕು ಎಂದವರು ಮನವಿ ಮಾಡಿಕೊಂಡರು. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ಹಿಮಾ ಕೊಹ್ಲಿ ಅವರಿದ್ದಾರೆ. ತ್ವರಿತ ವಿಚಾರಣೆಯ ಮನವಿ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ರಮಣ, ಇತರರೂ ಅರ್ಜಿ ಸಲ್ಲಿಸಿದ್ದಾರೆ. ಆ ಬಗ್ಗೆ ನೋಡಬೇಕಿದೆ. ರಜೆಯ ನಂತರ ಪರಿಶೀಲಿಸುತ್ತೇವೆ. ನಮಗೆ ಸಮಯ ಕೊಡಿ ಎಂದು ತಿಳಿಸಿದ್ದಾರೆ.

ಹಿಜಾಬ್ ಧರಿಸುವುದು ಇಸ್ಲಾಂನ ಅತ್ಯಗತ್ಯ ಪದ್ಧತಿಯಲ್ಲ ಎಂದು ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಉಡುಪಿಯ ಮಹಿಳಾ ಪಿ.ಯು. ಕಾಲೇಜಿನ ವಿದ್ಯಾರ್ಥಿನಿಯರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.


ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು
Most Populr Astrologer



ಉಚಿತ ಭವಿಷ್ಯ ಖಚಿತ ಪರಿಹಾರ, ಫೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ಧ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ
ಮೊಬೈಲ್ : 89716 99826



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ, ದಾವಣಗೆರೆ.
ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/2209/2021-22 ದಿನಾಂಕ: 16-03-2022
ಸಂಧಾನ ಪ್ರಕಟಣೆ ಸಂಖ್ಯೆ: 09/2021-22
(ಬಸ್ ನಿಲ್ದಾಣಗಳ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ ಹರಿಹರ ಬಸ್ ನಿಲ್ದಾಣದ, ಹೊರಭಾಗದಲ್ಲಿ ಯೂನಿಪೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳು ಖಾಲಿ ಇದ್ದು ಹಾಗೂ ಜಗಳೂರು ಬಸ್ ನಿಲ್ದಾಣದಲ್ಲಿ ಹೋರ್ಡಿಂಗ್ಸ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರ ಭಾಗದ ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ ಮೂಲಕ ಪ್ರಕಟಣೆ ಹೊರಡಿಸಲಾಗಿರುತ್ತದೆ. ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್: ksrtc.karnataka.gov.in ನಲ್ಲಿ ದಿನಾಂಕ: 16-03-2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ - 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ - 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು - 7760990461.
ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.
ವಾಸಾಸಂಇ/ಜಂ.ನ/ಅಡ್ವರ್ಟೋರ್/3803/2021-22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ, ದಾವಣಗೆರೆ.
ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/2210/2021-22 ದಿನಾಂಕ: 16-03-2022
ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 08/2021-22
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ಹರಿಹರ ಬಸ್ ನಿಲ್ದಾಣದ ಉಪಹಾರ ಗೃಹ (ಶಾಶ್ವತ ಸ್ಥಳ 05 ವರ್ಷ)ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹರಿಹರ ಬಸ್ ನಿಲ್ದಾಣದ ದ್ವಿ-ಚಕ್ರ ವಾಹನ ನಿಲ್ದಾಣ (ತೆರೆದ ಸ್ಥಳ 03 ವರ್ಷ)ಕ್ಕೆ ಸಂಧಾನದ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ. ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್: ksrtc.karnataka.gov.in ನಲ್ಲಿ ಮತ್ತು ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://eproc.karnataka.gov.in ನಿಂದ ದಿನಾಂಕ: 16-03-2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ - 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ - 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು - 7760990461.
ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.
ವಾಸಾಸಂಇ/ಜಂ.ನ/ಅಡ್ವರ್ಟೋರ್/3804/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ANVITH ENTERPRISES
FINANCIAL ADVISOR®
P.J. EXTENSION, DAVANGERE-577 004.
1) ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆಯಿಂದ ನಷ್ಟವನ್ನು ಅನುಭವಿಸಿದ್ದೀರಾ ?
2) ಪ್ರತಿದಿನದ ಭಾರೀ ಏರುಪೇರಿನ ವಹಿವಾಟಿಗೆ ಹಣವನ್ನು ಹೇಗೆ ಹೂಡಿಕೆ ಮಾಡಬೇಕೆಂಬ ಗೊಂದಲವೇ? ಈ ಸಮಸ್ಯೆಗಳಿಂದ ಮುಕ್ತರಾಗಿ.
3) Long-Term ಮತ್ತು Short-Term ಹೂಡಿಕೆ ಮುಖಾಂತರ ಸುರಕ್ಷಿತವಾಗಿ ಉತ್ತಮ ಲಾಭವನ್ನು ಪಡೆಯಲು ಹಾಗೂ
4) ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು Children's Savings Plans, Retirement Plans, Income-Tax Saving Plans, Health plans, Term Plans ಹಾಗೂ ಆರ್ಥಿಕವಾಗಿ ಸಬಲರಾಗಲು ಸಂಪರ್ಕಿಸಿ :
VIJAYA NIRANJANA MYLARA-8792673593



MAHA TVS
WANTED
SALES EXECUTIVES
FEMALE- 2 POST
With 2 years Experience in Sales
SALES EXECUTIVES
MALE- 3 POST
With 2 years Experience in Sales
ಮಹಾ ಟಿ.ವಿ.ಎಸ್.
ಸ್ಥಳ : 596, ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ ಹದಡಿ ರಸ್ತೆ, ವಾಣಿ ರೈಸ್ ಮಿಲ್ ಎದುರುಗಡೆ, ದಾವಣಗೆರೆ - 05.
Mail : mahaautomobile55@gmail.com
7624999241, 9513443299, 7022115555



ಜನ್ಮದಿನದ ಶುಭಾಶಯಗಳು







ಸರ್ವರಿಗೂ ದುರ್ಗಾಂಬಿಕಾ ಜಾತ್ರಾ ಮಹೋತ್ಸವದ ಶುಭಾಶಯಗಳು...
ಇಂದು ತಮ್ಮ ಹುಟ್ಟು ಹಬ್ಬದ ಸಂಭ್ರಮದಲ್ಲಿರುವ ಕ್ರೀಡಾಪಟುಗಳ ಕಣ್ಮಣಿಗಳೂ, ಉತ್ಸಾಹಿ ಯುವ ಮುಖಂಡರೂ, ಸಂಘಟನಾ ಚತುರರೂ, ನಗರ ಪಾಲಿಕೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರೂ, ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಗಳೂ ಆದ
ಶ್ರೀ ದಿನೇಶ್ ಕೆ. ಶೆಟ್ಟಿ
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
◆ ಶಿವಗಂಗಾ ಶ್ರೀನಿವಾಸ್
◆ ಆರ್.ಹೆಚ್. ನಾಗಭೂಷಣ್
◆ ಡಿ. ಬಸವರಾಜ್
◆ ಡಾ|| ರಮೇಶ್
◆ ರಾಜುರೆಡ್ಡಿ
◆ ಮಂಜುನಾಥ (ಬಾಪೂಜಿ)
◆ ಕೆ.ಎಚ್. ಚೈತನ್ಯಕುಮಾರ್
◆ ಶಾಮನೂರು ತಿಪ್ಪೇಶ್
◆ ಸುರಭಿ ಶಿವಮೂರ್ತಿ
◆ ಕುಬೇರ (ಜೆಪಿ)
ಜಿಲ್ಲಾ ಸ್ಟೇಡಿಯಂ ವಾಯು ವಿಹಾರ ಬಳಗ, ದಾವಣಗೆರೆ.

**ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಉತ್ತರ 30x46, ಕೆಳಗೆ 2BHK ಮೇಲೆ ಸಿಂಗಲ್ BHK ಬಸವೇಶ್ವರ ಲೇಔಟ್ ಪೂರ್ವ 30x40 ಕೆಳಗೆ 2BHK ಮೇಲೆ 2BHK ಅದರ ಮೇಲೆ ಸಿಂಗಲ್ ಅಟ್ಯಾಚ್ ರೂಂ (ಎರಡು ಫುಲ್ ಫರ್ನಿಷ್ಡ್)
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ ಸೈಟುಗಳು ಮಾರಾಟಕ್ಕಿವೆ. ಉತ್ತರ-ಪಶ್ಚಿಮ ಕಾರ್ನರ್ 30x50 ಎರಡು ಕಡೆ 40 ಅಡಿ ರಸ್ತೆ, ದಕ್ಷಿಣ 40x70 (ಅಕ್ಕ-ಪಕ್ಕ), ಪಶ್ಚಿಮ 30x40, 30x36, ಉತ್ತರ 50x100
ಐಗೂರು ವಿಜಯಕುಮಾರ್
99457 02495


## ಮಕ್ಕಳ ಲಸಿಕೆ

(1ನೇ ಪುಟದಿಂದ) ಎಲ್ಲರಿಗೂ ಮುನ್ನೆಚ್ಚರಿಕೆ ಡೋಸ್ ನೀಡುವುದಕ್ಕೆ ಚಾಲನೆ ನೀಡಲಾಗಿದೆ. ಎರಡನೇ ಡೋಸ್ ಪಡೆದು 39 ವಾರ ಕಳೆದಿರುವವರು ಮುನ್ನೆಚ್ಚರಿಕೆ ಡೋಸ್ ಪಡೆಯಬಹುದು.


**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸಕ್ಕಾಗಿ ಡಿ. ಫಾರ್ಮಾ ಅಥವಾ ಅನುಭವವುಳ್ಳ ಯುವಕರು ಬೇಕಾಗಿದ್ದಾರೆ. ಅನುಭವಕ್ಕೆ ತಕ್ಕಹಾಗೆ ಆಕರ್ಷಕ ವೇತನ ನೀಡಲಾಗುವುದು.
ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್, ಪಿ.ಜೆ. ಬಡಾವಣೆ, ದಾವಣಗೆರೆ.
94488 31396

**ಮನೆ ಮಾರಾಟಕ್ಕಿವೆ**
ಒಂದನೇ ಮೇನ್, ಒಂದನೇ ಕ್ರಾಸ್ ಭಗತ್ ಸಿಂಗ್ ನಗರ 15+40 ಕೆಳಗೆ ಮತ್ತು ಮೇಲೆ ಮನೆ ಮಾರಾಟಕ್ಕಿದೆ.
ಸೈಫುದ್ದೀನ್
79750 04328

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**WANTED**
Telecallers (F), Accoutant (M) Sales Officers (M/F), Works Manager (M), IT Technican, Software Testers /Developers
98444 92888

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**GST Registration**
INCOME TAX cases, Audit and for Account Maintenances
MEGHANA ASSOCIATES (R)
99809 16126

**GPSTR, KPTCL COACHING**
ಹೊಸ ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಕೋಚಿಂಗ್ ಅಕಾಡೆಮಿ, ಸೆಂಟ್‌ಪಾಲ್ ಕಾನ್ವೆಂಟ್ ರೋಡ್, ದಾವಣಗೆರೆ
63646 40296

**TO LET**
Office or Gowdown or Commercial Building for Rent
30 HP power speciality available
Ground Floor & II Floor 20 sqft
Opp. : Sub Register Office Behind Malabar Tyre, P.B. Road, Davangere.
98862 55308, 96111 14244

**PRINCE COLLEGE**
DAVANGERE
SSLC, PUC, BA, B.Com, B.Sc, M.A, M.Com, M.Sc, B.Lib, B.Lisc, M.B.A, M.C.A, LL.B, Diploma, B.Tech., D. Farm & All Courses
77609 55550, 96200 28627

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2 ಬೆಡ್ ರೂಂ, ಹೊಸ ಮನೆ, ವಿಳಾಸ : ಸಿದ್ಧವೀರಪ್ಪ ಬಡಾವಣೆ, 8 ನೇ ಕ್ರಾಸ್, ಡೋ. ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
ಸಂಪರ್ಕಿಸಿರಿ : 70198 78789
(Pets Not Allowed)

**ತಕ್ಷಣ ಬೇಕಾಗಿದ್ದರೆ**
ಕೋರಿಯಾರ್ ಆಫೀಸ್ ನಲ್ಲಿ ಡೆಲಿವರಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. 2 ವಿಲರ್ ಬೈಕ್ ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು ಇಂಗ್ಲಿಷ್ ಓದಲು, ಬರೆಯಲು ಬರಬೇಕು . ಮೂಲ ದಾಖಾಲಾತಿ ಗಳೊಂದಿಗೆ ಸಂಪರ್ಕಿಸಿ.
Call 98800 42597, 89711 19130
Whatsapp 7019983025

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಡಿಗ್ರಿ ಆದ ಹುಡುಗಿಯರು ಬೇಕಾಗಿದ್ದಾರೆ.
98861 09946

**ಲಿಂಗಾಯುತ ವಧು-ವರ**
ಲಿಂಗಯುತ, ಜಂಗಮ ಇಂಜಿನಿಯರ್ಸ್, ಡಾಕ್ಟರ್ಸ್, ಸರ್ಕಾರಿ ಹಾಗೂ ಖಾಸಗಿ ನೌಕರಿಯಲ್ಲಿರುವ ವಧು-ವರರಿಗಾಗಿ ಹಾಗೂ ವಿಧವೆ, ವಿಧುರ, ವಿಚ್ಚೇದಿತರ ಹೊಸ ಜಿವನಕ್ಕಾಗಿ ಸಂಪರ್ಕಿಸಿ.
98807 29108

**ಮಳಿಗೆ ಬಾಡಿಗೆಗೆ ಇದೆ**
12X30, 12x60 ಅಳತೆಯುಳ್ಳ ಪಶ್ಚಿಮ ದಿಕ್ಕಿಗೆ ಇರುವ ಮಳಿಗೆ ಬಾಡಿಗೆಗಿದೆ. ಹದಡಿ ರೋಡ್ ದಾವಣಗೆರೆ.
94480 28276
70198 33126

**TO-Let / ಬಾಡಿಗೆಗಿದೆ**
ಅಳತೆ 12x150 ಉಳ್ಳ ಮಳಿಗೆ ಬಾಡಿಗೆಗಿದೆ. ಚೌಕೀಪೇಟೆ ದಾವಣಗೆರೆ.
85531 86185
98458 70911

**ಸಂಘ-ಸಂಸ್ಥೆಗಳ**
ಬೈಲಾ ನೋಂದಣಿ, ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ.
MEGHANA ASSOCIATES. (R)
99809 16126

**ಬೇಕಾಗಿದ್ದಾರೆ**
B.A. B.Ed., BSc., B.Ed., Hindi B.Ed., ಆಭ್ಯರ್ಥಿಗಳು ಸಂಪರ್ಕಿಸಿ :
ಫೋ. : 80958 69654

**ಓಂ ಶ್ರೀ ತುಳಜಾಭವಾನಿ ಜ್ಯೋತಿಷ್ಯಾಲಯ**
ಪಂಡಿತ್: ಯಲ್ಲಪ್ಪರಾವ್ ಜೋಷಿ
ಕೊಳ್ಳೆಗಾಲದ ನಂ. 1 ಜ್ಯೋತಿಷ್ಯರು ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿದ್ದರೂ ಕೇವಲ 3 ದಿನಗಳಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಇಂದೇ ಭೇಟಿ ಕೊಡಿ. ದಾವಣಗೆರೆ.
99456 66887

**ಶಿಕ್ಷಕರು ಬೇಕಾಗಿದ್ದಾರೆ**
ಶ್ರೀ ಗುರುಕುಲ ವಿದ್ಯಾಸಂಸ್ಥೆ, ಸಿ.ಬಿ.ಎಸ್.ಇ ಶಾಲೆ, ತುರ್ಚಘಟ್ಟ. ಗಣಿತ, ವಿಜ್ಞಾನ, ಇಂಗ್ಲಿಷ್, ಗಣಕಯಂತ್ರ ವಿಷಯದಲ್ಲಿ ಪರಿಣತಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತಿ ಇರುವವರು, ಈ ನಂಬರ್‌ಗೆ ಸಂಪರ್ಕಿಸಿ.
73386 04513, 73386 04512

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 84769 49581

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು








# ಅರಿವಿನ ಕೊರತೆಯಾದಂತೆಲ್ಲಾ ಬದುಕು ದುರ್ಬಲ



> ‘ಪ್ರಸಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮತ್ತು ಸಂವಿಧಾನ’ ಕುರಿತ ಕಾರ್ಯಕ್ರಮದಲ್ಲಿ ಮಾನವ ಹಕ್ಕುಗಳ ವೇದಿಕೆ ಕಾರ್ಯದರ್ಶಿ ಎಲ್.ಹೆಚ್. ಅರುಣ್‌ಕುಮಾರ್ ವಿಶ್ಲೇಷಣೆ

ದಾವಣಗೆರೆ, ಮಾ. 16- ಸಂವಿಧಾನ ಅರ್ಥಮಾಡಿಕೊಳ್ಳದಿರುವುದೇ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ. ಅರಿವಿನ ಕೊರತೆಯಾದಂತೆಲ್ಲಾ ಬದುಕು ದುರ್ಬಲಗೊಳ್ಳುತ್ತದೆ. ಹಲವಾರು ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಸಲ್ಲದ ಅನ್ಯಾಯಕ್ಕೆ ಒಳಗಾಗುತ್ತೇವೆ ಎಂದು ಮಾನವ ಹಕ್ಕುಗಳ ವೇದಿಕೆ ಕಾರ್ಯದರ್ಶಿ ಎಲ್.ಹೆಚ್. ಅರುಣ್‌ಕುಮಾರ್ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಸ್ಲಂ ಜನಾಂದೋಲನ -ಕರ್ನಾಟಕ ಹಾಗೂ ಸಾವಿತ್ರಿ ಬಾಯಿ ಪುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿ, ಸಂವಿಧಾನ ಸ್ನೇಹ ಬಳಗ, ವಿವಿಧ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ‘ಪ್ರಸಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮತ್ತು ಸಂವಿಧಾನ’ ಕುರಿತು ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ ‘ಸಂವಿಧಾನ ಪೀಠಿಕೆ’ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಂವಿಧಾನವೆಂಬ ದೊಡ್ಡ ಆಲದ ಮರದ ಕೆಳಗೆ ನಾವೆಲ್ಲರೂ ಬದುಕುತ್ತಿದ್ದರೂ ಸಹ ಈ ವಿಶಾಲ ಮರದ ರೆಂಬೆ, ಕೊಂಬೆಗಳ ಪರಿಚಯ ಸ್ಪಷ್ಟವಾಗಿ ಇಲ್ಲ. ಅದರ ಫಲ-ಪುಷ್ಪಗಳನ್ನು ತಮ್ಮದಾಗಿಸಿಕೊಳ್ಳುವ ಅರಿವಿಲ್ಲ. ಬಹುತೇಕ ವಿದ್ಯಾವಂತರು, ಅವಿದ್ಯಾವಂತರು ಇಂತಹ ಅಜ್ಞಾನದಿಂದ ಬಳಲುತ್ತಿದ್ದಾರೆ ಎಂದರು.

ಸಂವಿಧಾನ ಕೇವಲ ಕಾನೂನಿನ ಕಡತವಲ್ಲ. ಅದು ಕಾರ್ಯಕ್ರಮಗಳ ಅನುಷ್ಠಾನ. ಇಡೀ ಭಾರತ ದೇಶದ ಸರ್ವ ಜನಾಂಗದ, ಸರ್ವ ಧರ್ಮೀಯರ ದೊಡ್ಡ ಗ್ರಂಥವಾಗಿದೆ ಎಂದು ಹೇಳಿದರು.

ಭಾರತ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ಬಹುತ್ವದ ದೇಶವಾಗಿದ್ದು, ಇದು ಅಮೂಲ್ಯ ಸಂವಿಧಾನವನ್ನು ಪಡೆದಿದೆ. ಸಂವಿಧಾನ ಕಗ್ಗಂಟಾಗಬಾರದು. ನಿತ್ಯ ಬದುಕಿನ ಅಂಗವಾಗಬೇಕು. ಈ ನಿಟ್ಟಿನಲ್ಲಿ ಭಾರತೀಯರೆಲ್ಲರೂ ಸಂವಿಧಾನದ ಆಶಯಗಳನ್ನು ಅರಿತು ಬದುಕು ಸಾಗಿಸುವ ಅಗತ್ಯವಿದೆ ಎಂದರು.

ವಕೀಲರಾದ ಅನಿಸ್‌ಪಾಷ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಭಾರತ ಸಂವಿಧಾನವು ದಿನ ನಿತ್ಯದ ಚರ್ಚೆಯ, ಬಳಕೆಯ ವಿಷಯವಾಗಿದೆ. ಪ್ರಸ್ತುತ ಸಂವಿಧಾನ ಆಪತ್ತಿನಲ್ಲಿ ಸಿಲುಕಿದೆ. ಆಳುವ ರಾಜಕಾರಣಿಗಳು ಸಂವಿಧಾನದ ಆಶಯಗಳನ್ನು ತಿಳಿಸಿಕೊಡುವಲ್ಲಿ ವಿಫಲರಾಗಿದ್ದಾರೆ. ಈ ಬಗ್ಗೆ ಪ್ರಜೆಗಳು ಎಚ್ಚರಿಸುವ ಕೆಲಸ ಮಾಡಬೇಕಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸ್ಲಂ ಜನಾಂದೋಲನ-ಕರ್ನಾಟಕ ರಾಜ್ಯ ಸಂಚಾಲಕ ಎ. ನರಸಿಂಹಮೂರ್ತಿ ಅವರು, ಜನ ಸಾಮಾನ್ಯರಿಗೆ ಸಂವಿಧಾನದ ಮೂಲ ಆಶಯಗಳನ್ನು ತಿಳಿಸಿಕೊಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸುವ ಜರೂರು ಎದುರಾಗಿದೆ ಎಂದು ಹೇಳಿದರು.

ಸಂವಿಧಾನವನ್ನು ಕೇವಲ ಕಾನೂನು ಓದಿದವರು ಅಷ್ಟೇ ಅಲ್ಲದೆ ದೇಶದ ಪ್ರತಿಯೊಬ್ಬರೂ ಸಹ ಅರ್ಥಮಾಡಿಕೊಳ್ಳಬೇಕಾಗಿದೆ. ಸಂವಿಧಾನ ಕೇವಲ ಕಾನೂನಿನ ದಾಖಲೆಯಲ್ಲ ಎಂದರು.

ಕಾರ್ಯಕ್ರಮದಲ್ಲಿ ಸ್ಲಂ ಜನಾಂದೋಲ-ಕರ್ನಾಟಕದ ಜಿಲ್ಲಾ ಸಂಚಾಲಕರಾದ ರೇಣುಕ ಯಲ್ಲಮ್ಮ, ವಿವಿಧ ಸಂಘಟನೆಗಳ ಮುಖಂಡರಾದ ಸಿ. ಬಸವರಾಜ್, ಮೊಹಮ್ಮದ್ ಹಯಾತ್, ಆದಿಲ್, ಚಮನ್‌ಸಾಬ್, ರಹಮತ್‌ವುಲ್ಲಾ, ಖಾಸಿಂಸಾಬ್, ಶಬ್ಬೀರ್ ಸಾಬ್, ಮಂಜುಳ ಮತ್ತಿತರರಿದ್ದರು.

## ನಗರದಲ್ಲಿ ನಾಳೆ ರಾಜ್ಯ ಪವರ್ ಲಿಫ್ಟಿಂಗ್ ಸ್ಪರ್ಧೆ

ದಾವಣಗೆರೆ, ಮಾ.16- ಕರ್ನಾಟಕ ರಾಜ್ಯ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ವತಿಯಿಂದ ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗಳು ಹಾಗೂ ರಾಷ್ಟ್ರೀಯ ಪವರ್ ಲಿಫ್ಟಿಂಗ್ ಸ್ಪರ್ಧೆಗಳಿಗೆ ಆಯ್ಕೆ ಪ್ರಕ್ರಿಯೆ ನಾಡಿದ್ದು ದಿನಾಂಕ 18 ರಂದು ನಗರದ ರಂಗಮಹಲ್‌ನಲ್ಲಿ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ಪವರ್ ಲಿಫ್ಟರ್ಸ್ ಸಂಸ್ಥೆಯ ಸಂಘಟನಾ ಕಾರ್ಯ ದರ್ಶಿ ಸಾಯಿನಾಥ್ ತಿಳಿಸಿದ್ದಾರೆ.

ಬಹುಮಾನ ವಿತರಣಾ ಕಾರ್ಯಕ್ರಮಕ್ಕೆ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಆಗಮಿಸಲಿದ್ದಾರೆ. ಅಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಉದ್ಯಮಿ ಎಂ. ಆನಂದ್ ಉಪಸ್ಥಿತರಿರಲಿದ್ದಾರೆ.

ಪವರ್ ಲಿಫ್ಟಿಂಗ್ ಕ್ಷೇತ್ರದಲ್ಲಿ ಸಾಧನೆಗೈದ ಅಕ್ರಂ ಭಾಷ, ವಿರೂಪಾಕ್ಷಪ್ಪ, ಫಕ್ರುದ್ದೀನ್ ಇವರಿಗೆ ಜೀವಮಾನ ಕ್ರೀಡಾ ಸಾಧನೆ ಪ್ರಶಸ್ತಿ ನೀಡಲಾಗುವುದು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಬಸವರಾಜ್, ಉಪಾಧ್ಯಕ್ಷೆ ಲಕ್ಷ್ಮಿದೇವಿ ದಯಾನಂದ್, ಸಹ ಕಾರ್ಯದರ್ಶಿ ಮಂಜುನಾಥ್, ಉಪಾಧ್ಯಕ್ಷ ವಿರೂಪಾಕ್ಷಪ್ಪ, ಸದಸ್ಯ ಗೋಪಾಲ್ ಉಪಸ್ಥಿತರಿದ್ದರು.

# ಪ್ರಾಣಿಗಳ ತ್ಯಾಜ್ಯಗಳಿಂದ ರಸಗೊಬ್ಬರ

ದಾವಣಗೆರೆಯಲ್ಲಿ ನಗರ ದೇವತೆ ದುಗ್ಗಮ್ಮನ ಜಾತ್ರೆ ಮೂರು ವರ್ಷಗಳಿಗೊಮ್ಮೆ ನಡೆಯುವ ವಿಜೃಂಬಣೆಯ ಹಬ್ಬ. ಹಬ್ಬದ ಪ್ರಯುಕ್ತ ಸಸ್ಯಹಾರಿಗಳಾದರೆ ಹೂರಣದ ಹೋಳಿಗೆ ಸಂಭ್ರಮ. ಮಾಂಸಾಹಾರಿ ಗಳಾದರೆ ಕುರಿ, ಕೋಳಿ, ಆಡು, ಕೋಣಗಳನ್ನು ಬಲಿ ಕೊಟ್ಟು ಆಹಾರವಾಗಿ ಸೇವಿಸುವ ಪದ್ಧತಿ ಇದೆ. ಆಹಾರದ ಹಕ್ಕು ವೈಯಕ್ತಿಕ ಒಲವು, ನಿಲುವು ಆಗಿರುವುದರಿಂದ, ಈ ಚರ್ಚೆಯನ್ನು ಬದಿಗಿರಿಸಿ ನೋಡುವುದಾದರೆ ಮಾಂಸಾಹಾರದ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ಸಂಸ್ಕರಿಸಿ, ರಸಗೊಬ್ಬರವಾಗಿ ಬಳಸುವ ಬಗ್ಗೆ ಹಾಗೂ ನಗರವನ್ನು ಸ್ವಚ್ಛವಾಗಿ ಇಡುವ ಬಗ್ಗೆ ನಾವೆಲ್ಲರೂ ಚಿಂತಿಸಿ, ಕಾರ್ಯೋನ್ಮುಖರಾಗಬೇಕಿದೆ.

ಪ್ರಾಣಿಗಳ ಮೂಳೆಗಳಲ್ಲಿ ರಂಜಕ (ಫಾಸ್ಪರಸ್) ಮತ್ತು ಕ್ಯಾಲ್ಸಿಯಂ ಹೇರಳವಾಗಿ ಇರುತ್ತದೆ. ರೈತರು ಬೆಳೆಗಳಿಗೆ ಬಳಸುವ NPK ರಸಗೊಬ್ಬರದಲ್ಲಿ ಇದು P ಎಂಬುದು ಫಾಸ್ಪರಸ್ಸ್ ಪ್ರತಿನಿಧಿಸುತ್ತದೆ. ರಂಜಕವು ಬೆಳೆಗಳು ಆಹಾರ ತಯಾರಿಸುವ ಪ್ರಕ್ರಿಯೆಗೆ ಸಹಕಾರಿ. ಗಿಡದ ಬೇರಿನ ಬೆಳವಣಿಗೆಗೆ, ಹೂವು ಬಿಡುವಿಕೆಗೆ ಮತ್ತು ಇಳುವರಿಗೆ ಅವಶ್ಯಕ. ರಂಜಕದ ಕೊರತೆಯಿಂದ ಹೂ ಬಿಡುವಿಕೆ ಕಡಿಮೆಯಾಗಿ ಇಳುವರಿಯನ್ನು ನಕಾರಾತ್ಮಕವಾಗಿ ಪ್ರಭಾವಿಸುತ್ತದೆ.

ಇಷ್ಟೆಲ್ಲಾ ಉಪಯೋಗಗಳಿರುವ ಪ್ರಾಣಿಗಳ ಮೂಳೆಗಳು ಮತ್ತು ಕೋಡುಗಳು ಪ್ರಾಣಿವಧೆ ಮತ್ತು ಆಹಾರ ತಯಾರಿಕೆಯ ನಂತರ ಬಹಳ ಕಡೆ ತ್ಯಾಜ್ಯವಾಗಿ ಹೋಗುತ್ತದೆ. ಇದು ನಗರದ ಸ್ವಚ್ಛತೆಗೂ ಮತ್ತು ವಿಲೇವಾರಿಗೂ ಸವಾಲುಗಳನ್ನು ಒಡ್ಡುತ್ತದೆ. ಏಕೆಂದರೆ ಈ ಮೂಳೆಗಳು ಬೇಗನೇ ಕೊಳೆಯುವುದಿಲ್ಲ. ಭೂಮಿಯ ಸಾವಯವ ಇಂಗಾಲವನ್ನು ಹೆಚ್ಚಿಸಿ ಫಲವತ್ತತೆಯನ್ನು ಅಭಿವೃದ್ಧಿ ಪಡಿಸುವ ಸಾಮರ್ಥ್ಯ ಇರುವ ಈ ವಸ್ತುಗಳು ರೈತರ ಜಮೀನನ್ನು ಸೇರಬೇಕಿದೆ

**ಈ ಮೂಳೆಗಳನ್ನು ನಾಲ್ಕು ಹಂತಗಳ ಸಂಸ್ಕರಿಸಿ ರಸಗೊಬ್ಬರವಾಗಿ ಬಳಸಬಹುದು.**

1) ಮೂಳೆಗಳನ್ನು ಸ್ವಚ್ಛಗೊಳಿಸಬೇಕು. ಮೂಳೆಗಳಿಂದ ಮಾಂಸದ ಅಂಶವನ್ನು ಬೇರ್ಪಡಿ ಸಬೇಕು. ಮೂರು ಇಂಚಿನ ಉದ್ದಕ್ಕೆ ಕತ್ತರಿಸಬೇಕು.

2) ಆರು ತಾಸುಗಳ (ಅಥವಾ ಅದಕ್ಕಿಂತ ಹೆಚ್ಚು) ಕಾಲ ನೀರಿನಲ್ಲಿ ಬೇಯಿಸಿ ಮೆತ್ತಗಾಗಿಸಬೇಕು. ದೊಡ್ಡ ಪ್ರಾಣಿಗಳ ಮೂಳೆಗಳಾದರೆ ಹೆಚ್ಚಿನ ಸಮಯ ಬೇಯಿಸಬಹುದು. ಮೂಳೆ ಮುಳುಗುವಷ್ಟು ಬೇಯಿಸಿದ ನಂತರ ಮೂಳೆಗಳು ಮೃದುವಾಗುತ್ತವೆ. ಬೇಗನೇ ಪುಡಿಯಾಗುತ್ತವೆ.

3) ಬೇಯಿಸಿದ ಮೂಳೆಗಳನ್ನು ಪುಡಿ ಮಾಡುವುದು.

4) ಮೂಳೆ ಪುಡಿಯನ್ನು ಒಣಗಿಸುವುದು ಮತ್ತು ತೇವಾಂಶವನ್ನು ತೆಗೆಯುವುದು. ಒಣಗಿಸಲು ಬಿಸಿಲಿನ ಶಾಖವನ್ನಾಗಲೀ ಅಥವಾ ಹೀಟರ್ ಬಳಸಬಹುದು.

**ಹಂತ ಮೂರು - ನಾಲ್ಕನ್ನು ಅದಲು ಬದಲು ಮಾಡಬಹುದು.**

ಈ ಮೂಳೆಯ ಪುಡಿಯನ್ನು ಬೋನ್ ಮೀಲ್ ಎಂದು ಕರೆಯಲಾಗುತ್ತದೆ. ಆಮ್ಲತೆ 7.2ಇರುವ ಇದು ಕ್ಷಾರಯುಕ್ತ ಭೂಮಿಗೆ ಅತ್ಯಂತ ಸೂಕ್ತ ರಸಗೊಬ್ಬರವಾಗುತ್ತದೆ. ಬೋನ್ ಮೀಲ್ ನ ಒಂದು ಕೆಜಿ ಬೆಲೆ 170 ರಿಂದ 300 ರೂ ವರೆಗೂ ಇದೆ.

ಪ್ರಾಣಿಯ ಕೋಡಿನಲ್ಲಿ 40% ಸಾವಯವ ಇಂಗಾಲ, 16% ಸಾರಜನಕ, ಸೂಕ್ಷ್ಮ ಪೋಷಕಾಂಶಗಳಾದ 0.014% ಮೆಗ್ನೀಷಿಯಂ, 118 ಮಿಲಿ ಗ್ರಾಂ/ಕೆಜಿ ಜಿಂಕ್ ಇದೆ. ಇದು ಬಹು ವರ್ಷಗಳ ಕಾಲ ಸಾರಜನಕವನ್ನು ಭೂಮಿಗೆ ಸೇರಿಸುವ ಸಾಮರ್ಥ್ಯ ಹೊಂದಿದೆ. ಇದನ್ನು ಭೂಮಿಯ ಫಲವತ್ತತೆಗಾಗಿ ಬಳಸಬಹುದು.

**ಮಾಂಸಾಹಾರ ಖಾದ್ಯ ಪ್ರಿಯರ ಪಾತ್ರ**

1. ಪ್ರಾಣಿ ತ್ಯಾಜ್ಯವನ್ನು ಬೇರ್ಪಡಿಸಿ ಸಂಗ್ರಹಿಸುವುದು

2. ಜಿಲ್ಲಾಡಳಿತ ಅಥವಾ ರೈತರಿಗೆ ನೀಡಿ ಭೂಮಿಯ ಫಲವತ್ತತೆಗೆ ಸಹಕರಿಸುವುದು.

**ಜಿಲ್ಲಾಡಳಿತದ ಪಾತ್ರ.**

1. ನಗರ ಪ್ರದೇಶದ ಪ್ರಾಣಿ ತ್ಯಾಜ್ಯವನ್ನು ಸ್ವಚ್ಛತೆಯ ಪೌರ ಕಾರ್ಮಿಕರು ಪ್ರತ್ಯೇಕವಾಗಿ ಸಂಗ್ರಹಿಸುವಂತೆ ತಿಳುವಳಿಕೆ ನೀಡಬೇಕು ಮತ್ತು ಸಂಸ್ಕರಿಸಿ ರೈತರಿಗೆ ಒದಗಿಸಬಹುದು.

2. ರೈತರು ಪ್ರಾಣಿ ತ್ಯಾಜ್ಯವನ್ನು ತಾವೇ ತಮ್ಮ ಭೂಮಿಗೆ ರಸಗೊಬ್ಬರವಾಗಿ ಬಳಸಲು ತಿಳುವಳಿಕೆ ನೀಡಿ ಪ್ರೋತ್ಸಾಹಿಸುವುದು.

ಇವೆಲ್ಲ ಅಂಶಗಳನ್ನು ಮಾಂಸಾಹಾರ ಖಾದ್ಯ ಪ್ರಿಯರು, ರೈತರು ಹಾಗೂ ಜಿಲ್ಲಾಡಳಿತ ಪರಿಣಾಮಕಾರಿಯಾಗಿ ಪರಿಗಣಿಸಿದರೆ ನಗರವೂ ಸ್ವಚ್ಛವಾಗಿರುವುದಲ್ಲದೇ ರೈತರ ಭೂಮಿಯೂ ಫಲವತ್ತಾಗುತ್ತದೆ.

**- ಪ್ರೊ. ಗಣೇಶ್ ಕೆ.**
ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗ
ಬಾಪೂಜಿ ಎಂಜಿನಿಯರಿಂಗ್ ಕಾಲೇಜು
ದಾವಣಗೆರೆ

## ಮುಕ್ತ ವಿವಿ : ಅರ್ಜಿ ಸಲ್ಲಿಕೆಗೆ ಕರೆ

ದಾವಣಗೆರೆ, ಮಾ. 16- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2021-22ರ ಜನವರಿ ಆವೃತಿಯ ಪದವಿ/ಸ್ನಾತಕೋತ್ತರ ಪದವಿಗಳಿಗೆ ಮತ್ತು ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್ ಅಧ್ಯಯನ ವಿಷಯಗಳಿಗೆ ಸಂಬಂಧಿಸಿ ದಂತೆ, ಈಗಾಗಲೇ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಯಾವುದೇ ದಂಡ ಶುಲ್ಕವಿಲ್ಲದೇ ಅರ್ಜಿ ಸಲ್ಲಿಸಲು ಮಾ.31 ರಂದು ಅಂತಿಮ ದಿನಾಂಕವಾಗಿರುತ್ತದೆ.

ಬಿ.ಇಡಿ, ಶಿಕ್ಷಣ ಕ್ರಮದ ಸಾಮಾನ್ಯ ಪ್ರವೇಶ ಪರೀಕ್ಷೆಯ ಪರಿಷ್ಕೃತ ದಿನಾಂಕ ಮಾ.20 ರಂದು ಆಗಿರುತ್ತದೆ. ವಿವರಕ್ಕೆ ವಿವಿ ವೆಬ್‌ಸೈಟ್ www.ksoumusuru.ac.in ಅಥವಾ ಮೊ.ನಂ. 8095939359, 9916009318, 9008905457 ಕರೆ ಮಾಡಿ ಸಂಪರ್ಕಿಸಬಹುದು ಅಥವಾ ಪ್ರಾದೇಶಿಕ ಕೇಂದ್ರ ಕಛೇರಿಗೆ ಖುದ್ದು ಭೇಟಿ ನೀಡಿ ಪಡೆದುಕೊಳ್ಳುವಂತೆ ಪ್ರಾದೇಶಿಕ ನಿರ್ದೇಶಕ ಡಾ. ವಿಜಯ್‌ಪ್ರಕಾಶ್ ತಿಳಿಸಿದ್ದಾರೆ.

## ಪಶು ಚಿಕಿತ್ಸೆಗೆ 275 ಆಂಬ್ಯುಲೆನ್ಸ್ : ಸಚಿವ ಚವ್ಹಾಣ್

ಬೆಂಗಳೂರು, ಮಾ. 16 - ಪಶು ಚಿಕಿತ್ಸೆಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರದ ಅನುದಾನದಲ್ಲಿ 275 ಸಂಚಾರಿ ಆಂಬ್ಯುಲೆನ್ಸ್‌ಗಳನ್ನು ಖರೀದಿಸಲಾಗುತ್ತಿದ್ದು, ಈ ವರ್ಷವೇ ಲೋಕಾರ್ಪಣೆ ಮಾಡುವುದಾಗಿ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಮುನಿರಾಜು ಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಪಶು ಸಂಜೀವಿನಿ ಯೋಜನೆಯಡಿ ಈಗಾಗಲೇ 15 ಆಂಬ್ಯುಲೆನ್ಸ್ ಖರೀದಿಸಿದ್ದು, ಅವು ಬೀದರ್, ರಾಯಚೂರು, ಕಲಬುರಗಿ, ಯಾದಗಿರಿ, ಧಾರವಾಡ, ವಿಜಯಪುರ, ದಕ್ಷಿಣ ಕನ್ನಡ, ಹಾಸನ, ಮಂಡ್ಯ ಶಿವಮೊಗ್ಗ, ಉತ್ತರ ಕನ್ನಡ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅವುಗಳಲ್ಲಿ 12 ರೀತಿಯ ವೈದ್ಯಕೀಯ ಸೌಲಭ್ಯಗಳಿವೆ, ಅವುಗಳನ್ನು ಪಾಲಿಕ್ಲಿನಿಕ್ ಸಂಸ್ಥೆಗಳ ವಶಕ್ಕೆ ನೀಡಲಾಗಿದೆ ಎಂದರು.

ಪ್ರತಿ ಒಂದು ಲಕ್ಷ ಜಾನುವಾರಿಗೆ ಒಂದು ಆಂಬ್ಯುಲೆನ್ಸ್‌ನಂತೆ ಸಂಚಾರಿ ಆಂಬ್ಯುಲೆನ್ಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ, ಕೇಂದ್ರ ಸರ್ಕಾರದ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಯೋಜನೆಯಡಿ 483.80 ಲಕ್ಷ ರೂ. ವೆಚ್ಚದಲ್ಲಿ ಹೆಚ್ಚುವರಿ 275 ವಾಹನಗಳನ್ನು ಖರೀದಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ, ಬಹುತೇಕ ಈ ವರ್ಷವೇ ಸಂಚಾರಿ ಚಿಕಿತ್ಸಾಲಯಗಳು ಲೋಕಾರ್ಪಣೆಗೊಳ್ಳಲಿವೆ ಎಂದರು.

ಅನಿಲ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ದೇಶಿ ಮೊಟ್ಟೆ ಕೋಳಿ ಸಾಕಾಣಿಕೆ ಕೇಂದ್ರವನ್ನು ಆರಂಭಿಸಲಾಗುವುದು, ಗ್ರಾಮೀಣ ಭಾಗದಲ್ಲಿ ಕೋಳಿ ಸಾಕಾಣಿಕೆಗೆ ಉತ್ತೇಜನ ನೀಡಲು ಈ ಕ್ರಮ ಕೈಗೊಳ್ಳಲಾಗಿದೆ, ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶು ವಿಶ್ವವಿದ್ಯಾಲಯದಲ್ಲಿ ಕೋಳಿ ರೋಗ ಪತ್ತೆಗೆ ಸಂಶೋ ಧನಾ ಕೇಂದ್ರ ಆರಂಭಿಸಲಾಗುವುದು, ಗ್ರಾಮೀಣ ಭಾಗದ ಜನರಿಗೆ ಕೃಷಿ ಜೊತೆಗೆ ಕೋಳಿ ಸಾಕಾಣಿಕೆಗೆ ಪ್ರೋತ್ಸಾಹ ನೀಡುವುದು ಇದರ ಉದ್ದೇಶ ಎಂದು ಹೇಳಿದರು.

### ಮಾನ್ಯ ಘನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಲಯದಲ್ಲಿ ದಾವಣಗೆರೆ.

**ಪಿ ಅಂಡ್ ಎಸ್‌ಸಿ 11/2022**

ಅರ್ಜಿದಾರು : 1) ಪಿ.ಆರ್. ಮಧುಕುಮಾರ್ ಬಿನ್ ರುದ್ರಪ್ಪ, ವಯಸ್ಸು 40 ವರ್ಷ 2) ಎಂ.ಆರ್. ಲೋಕೇಶ್ ಬಿನ್ ರುದ್ರಪ್ಪ, ವಯಸ್ಸು 35 ವರ್ಷ, ಅರ್ಜಿದಾರ ನಂ. 1 ಮತ್ತು 2 ನೇಯವರು ಮಳಲ್ಕೆರೆ ವಾಸಿ, ದಾವಣಗೆರೆ ತಾಲ್ಲೂಕು
ವಿರುದ್ಧ /- ಎದುರುದಾರರು : ಯಾರೂ ಇಲ್ಲ.

**ಸಿ.ಪಿ.ಸಿ. ಕಾಯ್ದೆ ಆದೇಶ 5 ನಿಯಮ 20 ರೇ/ವಿ ಕಲಂ 151 ಅಡಿಯಲ್ಲಿ ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಕೇಸನ್ನು ಅರ್ಜಿದಾರರು ತಮ್ಮ ತಂದೆಯ ಅಕ್ಕ ಸಾವಿತ್ರಮ್ಮ ಕೋಂ ಕೆಂಚವೀರಪ್ಪ ಇವರು ಅರ್ಜಿದಾರ ನಂ. 1 ಮತ್ತು 2 ನೇಯವರ ಹೆಸರಿಗೆ ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿ ಮಳಲ್ಕೆರೆ ಗ್ರಾಮದ ರಿ.ಸ.ನಂ. 59/2 ಪಿ 7 ಈಗಿನ 59/2 ರಲ್ಲಿ ಎಕರೆ 01 ಗುಂಟೆ 26 ಜಮೀನನ್ನು ದಿನಾಂಕ : 09.05.2011 ರಂದು ನೋಂದಾಯಿತ ವಿಲ್ ಯಾನೆ ಮರಣ ಶಾಸನ ಪತ್ರ ಬರೆದಿದ್ದು, ಸದರಿ ಸೊತ್ತನ್ನು ಅರ್ಜಿದಾರ ನಂ. 1 ಮತ್ತು 2 ನೇಯವರೇ ಮಾಲೀಕರೆಂದು ಘೋಷಣೆ ಮಾಡಿ ಅರ್ಜಿದಾರರ ಪರವಾಗಿ ಪ್ರೊಬೇಟ್ ಸರ್ಟಿಫಿಕೆಟನ್ನು ನೀಡಲು ಹಾಗೂ ಇತರೇ ಯುಕ್ತ ಪರಿಹಾರಗಳನ್ನು ಹೊಂದುವಂತೆ ಕೋರಿ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ.

ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರಾದರೂ ತಕರಾರು ಮಾಡುವವರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ : 22.04.2022 ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ಷೆಡ್ಯೂಲ್ : ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿ ಮಳಲ್ಕೆರೆ ಗ್ರಾಮದ ರಿ.ಸ.ನಂ. 59/2 ಪಿ7 ಈಗಿನ 59/2 ರಲ್ಲಿ ಎಕರೆ 01 ಗುಂಟೆ 26 ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ ; ಕಲಿವೀರಪ್ಪನವರ ಜಮೀನು, ಪಶ್ಚಿಮಕ್ಕೆ ; ದೇವೇಂದ್ರಯ್ಯನವರ ಜಮೀನು, ಉತ್ತರಕ್ಕೆ : ಮಹಲಿಂಗಪ್ಪನವರ ಜಮೀನು, ದಕ್ಷಿಣಕ್ಕೆ : ಶಾರದಮ್ಮ ಇವರ ಜಮೀನು.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 16.03.2022 ರಂದು ಕೊಡಲ್ಪಟ್ಟಿದೆ.

ಸಹಿ/- ಅರ್ಜಿದಾರರ ಪರ ವಕೀಲರು
(ಕೆ.ಸಿ. ಪ್ರಭು) ವಕೀಲರು ದಾವಣಗೆರೆ.
ಫೋನ್ : 99029 99303

ಸಹಿ/- ಮುಖ್ಯ ಆಡಳಿತಾಧಿಕಾರಿಗಳು
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ದಾವಣಗೆರೆ.


REQUIRED
SENIOR HR MANAGER
QUALIFICATION : MBA with Industrial Knowledge
Send Your Profile to
msipl.hr@live.com
ಮಹಾರಾಜ್ ಸೋಪ್ಸ್ ಇಂಡಸ್ಟ್ರಿ (ಪ್ರೈ) ಲಿ.,
ಲೋಕಿಕೆರೆ ಮುಖ್ಯರಸ್ತೆ, ಇಂಡಸ್ಟ್ರೀಯಲ್ ಏರಿಯಾ ಹತ್ತಿರ, ದಾವಣಗೆರೆ ಫೋ : 08192-262826
MAHARAJ
Website : www.msiplgroup.com | e-mail : customercare@msiplgroup.com
Customer Care : 8880062826,
M : 9513443299


## ಬಾಡಾದಲ್ಲಿ ಇಂದು ಮಹಿಳಾ ಸಮಾವೇಶ

ಬಿ.ಎಂ. ವಾಗೀಶಸ್ವಾಮಿ ಅಭಿಮಾನಿ ಬಳಗ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇಂದು ಸಂಜೆ 4 ಗಂಟೆಗೆ ಬಾಡ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಮಹಿಳಾ ಸಮಾವೇಶ ಮತ್ತು ನಗೆಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಹಾಸ್ಯ ಕಲಾವಿದರಾದ ಗಂಗಾವತಿ ಪ್ರಾಣೇಶ್, ಕೃಷ್ಣೆಗೌಡ, ನರಸಿಂಹ ಜೋಷಿ, ಬಸವರಾಜ್ ಮಾಮನಿ, ಇಂದುಮತಿ ಸಾಲಿಮಠ ಅವರು ಹಾಸ್ಯ ಸಂಜೆ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

# ನಗರದಲ್ಲಿ ನಾಳೆ ಡಿಎಸ್ಎಸ್ ಸಮಾವೇಶ

ದಾವಣಗೆರೆ, ಮಾ. 16- ಪ್ರೊ.ಬಿ. ಕೃಷ್ಣಪ್ಪನವರು ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿ ವತಿಯಿಂದ ನಾಡಿದ್ದು ದಿನಾಂಕ 18 ಹಾಗೂ 19 ರಂದು ರಾಜ್ಯ ಮಟ್ಟದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಶಿವಮೊಗ್ಗ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ 18ರಂದು ಬೆಳಿಗ್ಗೆ 10.30ಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಕಾರ್ಯಕ್ರಮ ನಡೆಯುವ ಸ್ಥಳವಾದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾ ಮಂಟಪಕ್ಕೆ ಬೃಹತ್ ಮೆರವಣಿಗೆ ಮೂಲಕ ತೆರಳಲಾಗುವುದು ಎಂದರು.

ಮಧ್ಯಾಹ್ನ 12ಕ್ಕೆ ನಡೆಯುವ ಸಭಾ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಉದ್ಘಾಟಿಸಲಿದ್ದಾರೆ. ಮೈಸೂರಿನ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ದಸಂಸ ಹಿರಿಯ ನಾಯಕ ಮುಂಡರಗಿ ನಾಗರಾಜ್, ಹೂಡಿ ಮಂಜುನಾಥ ಇತರರು ಆಗಮಿಸಲಿದ್ದಾರೆ.

ಮಧ್ಯಾಹ್ನ 3 ರಿಂದ 4ರವರೆಗೆ 'ಚರಿತ್ರೆಯ ಕಣ್ಣಲ್ಲಿ ದಲಿತರು' ಕುರಿತು ಪ್ರಥಮ ಗೋಷ್ಠಿ. ಸಂಜೆ 4 ರಿಂದ 'ಪ್ರೊ.ಬಿ.ಕೃಷ್ಣಪ್ಪ ಮತ್ತು ದಲಿತ ಚಳವಳಿ ಹೋರಾಟದ ದಾರಿ ಮತ್ತು ಗುರಿ' ಕುರಿತ 2ನೇ ಗೋಷ್ಠಿ ನಡೆಯಲಿದೆ.

ದಿನಾಂಕ 19ರಂದು 'ದಲಿತ ಮಹಿಳೆಯರ ಸಂಕಟಗಳು ಮತ್ತು ಸಂವೇದನೆ' ಕುರಿತ 3ನೇ ಗೋಷ್ಠಿ 9.30 ರಿಂದ 10.30ರವರೆಗೆ. 'ದಲಿತರು ಮತ್ತು ಭಾರತ ಸಂವಿಧಾನದ ವರ್ತಮಾನದ ಸವಾಲುಗಳು ಮತ್ತು ಸಾಧ್ಯತೆಗಳು' ಕುರಿತು 4ನೇ ಗೋಷ್ಠಿ ಹಾಗೂ 11.30 ರಿಂದ 12.30ರವರೆಗೆ 'ದಲಿತರು ಮತ್ತು ಸಾಂಸ್ಕೃತಿಕ ರಾಜಕಾರಣ ದಾರಿ ಮತ್ತು ಗುರಿ' ಕುರಿತು 5ನೇ ಗೋಷ್ಠಿ ನಡೆಯಲಿದೆ.

ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅತ್ತಿಗುಂಡಿ ಕರಿಯಪ್ಪ, ಮಹಾಂತೇಶ್, ವಿಜಯಮ್ಮ, ಅಣಜಿ ಹನುಮಂತಪ್ಪ, ಬೇತೂರು ಹನುಮಂತಪ್ಪ, ಲಿಂಗರಾಜ್, ಸಣ್ಣ ಅಜ್ಜಯ್ಯ ಉಪಸ್ಥಿತರಿದ್ದರು.

# 12-14 ವರ್ಷದ ಮಕ್ಕಳ ಲಸಿಕಾ ಅಭಿಯಾನಕ್ಕೆ ಚಾಲನೆ




ದಾವಣಗೆರೆ, ಮಾ.16- ನಗರದ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಜಿಲ್ಲೆಯ 12 ರಿಂದ 14 ವರ್ಷದ ಎಲ್ಲಾ ಮಕ್ಕಳಿಗೆ ಕಾರ್ಬಿ ವ್ಯಾಕ್ಸ್ ಲಸಿಕಾ ಅಭಿಯಾನಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಡಿಹೆಚ್ಓ ಡಾ. ನಾಗರಾಜ್, ಡಿಎಸ್ ಡಾ. ಷಣ್ಮುಖಪ್ಪ, ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ, ಆರ್‌ಎಂಓ ಡಾ. ಮಂಜುನಾಥ್ ಪಾಟೀಲ್, ಟಿಹೆಚ್ಓ ಡಾ. ಎಲ್.ಡಿ. ವೆಂಕಟೇಶ್, ಡಾ.ಸುರೇಶ್ ಗುಂಡಪಲ್ಲಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ.ಸುರೇಶ್ ಎನ್. ಬಾರ್ಕಿ ಹಾಗೂ ಜಿಲ್ಲಾಸ್ಪತ್ರೆ ವೈದ್ಯರು, ಜಿಲ್ಲಾ ಮತ್ತು ತಾಲ್ಲೂಕು ಆಶಾ ಮೆಂಟರ್, ಆಶಾ ಕಾರ್ಯಕರ್ತರು, ಲಸಿಕಾಕರಣ ವಿಭಾಗದ ಅಧಿಕಾರಿಗಳು ಹಾಜರಿದ್ದರು.

# ಹಿಜಾಬ್ : ತೀರ್ಪಿಗೆ ವಿರೋಧ

## ನಾಲ್ವರು ಮುಸ್ಲಿಂ ವಿದ್ಯಾರ್ಥಿನಿಯರ ಪ್ರತಿಭಟನೆ



ದಾವಣಗೆರೆ, ಮಾ.16- ಹಿಜಾಬ್ ಬಗ್ಗೆ ಕೋರ್ಟ್ ತೀರ್ಪು ವಿರೋಧಿಸಿ ನಾಲ್ವರು ಮುಸ್ಲಿಂ ವಿದ್ಯಾರ್ಥಿನಿಯರು ನಗರದಲ್ಲಿಂದು ಪ್ರತಿಭಟನೆ ನಡೆಸಿದರು.

ಡೆಂಟಲ್ ಕಾಲೇಜು ರಸ್ತೆ ಪಕ್ಕದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಜಮಾಯಿಸಿದ್ದ ವಿದ್ಯಾರ್ಥಿನಿಯರು, ಹಕ್ಕಿಗಾಗಿ ಹೋರಾಡೋಣ ಅನ್ನೋ ಸ್ಲೋಗನ್ ಪ್ರದರ್ಶಿಸುತ್ತಾ ಕೋರ್ಟ್ ತೀರ್ಪನ್ನು ವಿರೋಧಿಸಿದರು.


ಧರ್ಮದ ವಿಚಾರಲ್ಲಿ ಕೋರ್ಟ್ ಮಧ್ಯ ಪ್ರವೇಶಿಸಬಾರದೆಂದು ವಿದ್ಯಾರ್ಥಿನಿಯರು ಒತ್ತಾಯಿಸಿದರು. ನಾವು ಹಿಜಾಬ್ ಧರಿಸಿಯೇ ಕಾಲೇಜ್‌ಗೆ ಹೋಗುತ್ತೇವೆ ಎಂದು ವಿದ್ಯಾರ್ಥಿನಿಯರು ಪಟ್ಟು ಹಿಡಿದರು.

# ನಂದೀಶ ಸ್ವಾಮಿಗೆ ಪ್ರಶಸ್ತಿ ಪ್ರದಾನ



ದಾವಣಗೆರೆ, ಮಾ.16- ಭಾರತೀಯ ಕಲಾ, ಸಾಂಸ್ಕೃತಿಕ ಅಕಾಡೆಮಿಯು ವಿವಿಧ ಕ್ಷೇತ್ರಗಳ ಸಾಧಕರಿಗೆ ಕೊಡ ಮಾಡುವ 'ರಾಷ್ಟ್ರೀಯ ರತ್ನ' ಪ್ರಶಸ್ತಿಗೆ ಧಾರ್ಮಿಕ ಸೇವೆಗಾಗಿ ನಗರದ ಕೆ.ಎಂ. ನಂದೀಶ ಸ್ವಾಮಿ ಭಾಜನರಾಗಿದ್ದಾರೆ. ಅಕಾಡೆಮಿಯಿಂದ ಸರ್ಕಾರಿ ನೌಕರರ ಭವನದಲ್ಲಿ ನಿನ್ನೆ ನಡೆದ ಸಾಂಸ್ಕೃತಿಕೋತ್ಸವ ಕಾರ್ಯಕ್ರಮದಲ್ಲಿ ನಂದೀಶ ಸ್ವಾಮಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

# ಇಂದು ಒನಕೆ ಒಬವ್ವ ಜಯಂತಿ




ದಾವಣಗೆರೆ, ಮಾ.16- ಸಮಾಜದ ಮನವಿಗೆ ಸ್ಪಂದಿಸಿ ಪ್ರತಿ ವರ್ಷ ನ.11 ರಂದು ಒನಕೆ ಓಬವ್ವ ಜಯಂತಿ ಆಚರಣೆಗೆ ಆದೇಶ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅಭಿನಂದಿಸುವುದಾಗಿ ಜಿಲ್ಲಾ ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಎಸ್.ಶೇಖರಪ್ಪ ಹೇಳಿದ್ದಾರೆ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 17 ರಂದು ಬೆಂಗಳೂರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಓಬವ್ವ ಜಯಂತಿ ಆಚರಣೆಯ ಉದ್ಘಾಟನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳು, ನೆಹರೂ ಚ. ಓಲೇಕಾರ್ ಅವರ ಸಮ್ಮುಖದಲ್ಲಿ ಉದ್ಘಾಟಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕಾರ್ಯಾಧ್ಯಕ್ಷ ಸಿ.ಜಯಪ್ಪ, ಹೆಚ್.ಕೆ. ಕೊಟ್ರೇಶ್ ಹಳೆಬಾತಿ, ಹೆಚ್.ಕೆ. ಚನ್ನಪ್ಪ ಉಪಸ್ಥಿತರಿದ್ದರು.

# ಸಿ.ಎ : ನಿಧಿ ಹಿರೇಮಠ ಉತ್ತೀರ್ಣ



ದಾವಣಗೆರೆ, ಮಾ.16- ಪ್ರಸಕ್ತ ಸಾಲಿನ ಸಿ.ಎ. ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ನಿಧಿ ಹಿರೇಮಠ ತನ್ನ 22 ವಯಸ್ಸಿನಲ್ಲಿ ಚಾರ್ಟಡ್ ಅಕೌಂಟೆಂಟ್ ಆಗಿ ಹೊರ ಹೊಮ್ಮಿದ್ದಾರೆ. ಇವರು ಧಾರವಾಡ ನಗರದ ಕಿರಣ್ ಹಿರೇಮಠ ಹಾಗೂ ಗೌರಿ ಹಿರೇಮಠ ದಂಪತಿ ಪುತ್ರಿ.

ಇವರು ಪ್ರಾಥಮಿಕ ಶಿಕ್ಷಣವನ್ನು ಮಲ್ಲಸಜ್ಜನ ಶಾಲೆ, ಪ್ರೌಢ ಶಿಕ್ಷಣವನ್ನು ದಾವಣಗೆರೆಯ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ವಸತಿ ಶಾಲೆಯಲ್ಲಿ ಮತ್ತು ಧಾರವಾಡ ಜೆ.ಎಸ್.ಎಸ್. ಕಾಲೇಜಿನಲ್ಲಿ ಪಿಯುಸಿಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದು ಬೆಂಗಳೂರಿನ ಕೆ.ಪಿ. ರಾವ್ ಕಂಪನಿ ಹಾಗೂ ಪುಣೆಯ ಗೋಸಾವಿ ಕಂಪನಿ ಇವುಗಳಲ್ಲಿ ಆರ್ಟಿಕಲ್‌ಶಿಪ್ ಅನುಭವ ಪಡೆದಿದ್ದಾರೆ.

ಇವರು ನಗರದ ಚರಲಿಂಗಯ್ಯ ಮತ್ತು ವಿಮಲ ಹಂಜಗಿಮಠ ದಂಪತಿ ಮೊಮ್ಮಗಳು.

# ಜಿಗಳಿಯಲ್ಲಿ ಸಂಭ್ರಮದ ಗಜ ಉತ್ಸವ



ಮಲೇಬೆನ್ನೂರು, ಮಾ.16- ಜಿಗಳಿ ಗ್ರಾಮದ ಶ್ರೀ ರಂಗನಾಥ ಸ್ವಾಮಿ ರಥೋತ್ಸವದ ಅಂಗವಾಗಿ ಶ್ರೀ ಸ್ವಾಮಿಯ ಆನೆ ಉಚ್ಛಾಯ ಬುಧವಾರ ಬೆಳಿಗ್ಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಸಂಜೆ ಶಸ್ತ್ರ ಕಾರ್ಯಕ್ರಮಗಳು ನಡೆದವು. ಇದೇ ದಿನ ತಡರಾತ್ರಿ (ಗುರುವಾರ ಬೆಳಗಿನಜಾವ) ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.ಗುರುವಾರ ಬೆಳಿಗ್ಗೆ ಜವಳ, ಮುದ್ರೆ, ಸಂಜೆ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಗುವುದು.

# ಪರಿಸರ ಅಧಿಕಾರಿ ಮನೆ ಮೇಲೆ ಎಸಿಬಿ ಅಧಿಕಾರಿಗಳ ದಾಳಿ




ದಾವಣಗೆರೆ, ಮಾ.16- ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಮಹೇಶ್ವರಪ್ಪ ಕಚೇರಿ, ಮನೆ ಸೇರಿದಂತೆ ಮೂರು ಕಡೆ ಏಕಕಾಲಕ್ಕೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಇಂದು ದಾಳಿ ನಡೆಸಿದ್ದಾರೆ.

ಪರಿಸರ ಅಧಿಕಾರಿ ಎಂ.ಎಸ್. ಮಹೇಶ್ವರಪ್ಪ ಕಾರ್ಯನಿರ್ವಹಿಸುತ್ತಿರುವ ದೇವರಾಜ ಅರಸು ಬಡಾವಣೆಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಕಚೇರಿ, ವಿದ್ಯಾನಗರದ ರಂಗನಾಥ ಬಡಾವಣೆಯ ಮನೆ ಹಾಗೂ ಚನ್ನಗಿರಿ ತಾಲ್ಲೂಕಿನ ಕಂಸಾಗರ ಗ್ರಾಮದಲ್ಲಿ ಮನೆ ಮೇಲೆ ಏಕಕಾಲಕ್ಕೆ ಎಸಿಬಿ ದಾಳಿ ನಡೆಸಿದಾಗ ಅಪಾರ ಆಸ್ತಿ, ಸ್ವತ್ತನ್ನು ಪತ್ತೆಯಾಗಿದೆ ಎಂದು ಹೇಳಲಾಗಿದೆ.

10 ಮನೆಗಳು, 2 ನಿವೇಶನಗಳು, 10 ಎಕರೆ ಜಮೀನು, 1 ಕಾರು, 1 ಬೈಕ್, ಲಕ್ಷಾಂತರ ರೂ. ನಗದು, ಚಿನ್ನ-ಬೆಳ್ಳಿ ಆಭರಣ, ವಸ್ತುಗಳು ಸೇರಿದಂತೆ ದುಬಾರಿ ವಸ್ತುಗಳನ್ನು ಪತ್ತೆ ಮಾಡಿದೆ. ದಾವಣಗೆರೆ ಎಸಿಬಿ ಎಸ್ಪಿ ಜಯಪ್ರಕಾಶ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ.

# ಆನೆಕೊಂಡದಲ್ಲಿ ನಾಳೆ ರಥೋತ್ಸವ



ದಾವಣಗೆರೆ,ಮಾ.16- ಸುಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವವು ನಾಡಿದ್ದು ದಿನಾಂಕ 18ರ ಶುಕ್ರವಾರ ರಾತ್ರಿ 10 ಕ್ಕೆ ನಡೆಯಲಿದೆ. ಸದ್ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗುವಂತೆ ಕೋರಲಾಗಿದೆ.









# ನಗರದಲ್ಲಿ ಇಂದು 86ನೇ ಶಿವರಾತ್ರಿ ಕಾರ್ಯಕ್ರಮ

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾ ನಗರ ಶಾಖೆಯಿಂದ 86ನೇ ಶಿವರಾತ್ರಿ ಕಾರ್ಯಕ್ರಮವು ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ 5 ಗಂಟೆಗೆ ನಡೆಯಲಿದೆ. ಶಿವರಾತ್ರಿ ರಹಸ್ಯ ಕುರಿತು ಬ್ರಹ್ಮಾಕುಮಾರಿ ಲೀಲಾಜಿ ಉಪನ್ಯಾಸ ನೀಡುವರು. ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ಡಾ. ಕೆ.ಎಸ್. ಮೀನಾಕ್ಷಿ ವಹಿಸುವರು. ಮುಖ್ಯ ಅತಿಥಿಗಳಾಗಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ, ನಗರ ಪಾಲಿಕೆ ಸದಸ್ಯೆ ಶ್ರೀಮತಿ ವೀಣಾ ಆಗಮಿಸುವರು.

ಈ ಕಾರ್ಯಕ್ರಮಕ್ಕೂ ಮುನ್ನ ಸಂಜೆ 4 ಗಂಟೆಗೆ ನೂತನ ಕಾಲೇಜು ಹಿಂಭಾಗದಲ್ಲಿರುವ ಪ್ರಜಾಪಿತ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಶಿವಧ್ವಜಾರೋಹಣ ಕಾರ್ಯಕ್ರಮ ಜರುಗುವುದು ಎಂದು ಸಂಚಾಲಕರಾದ ಬ್ರಹ್ಮಾಕುಮಾರಿ ಗೀತಾ ತಿಳಿಸಿದ್ದಾರೆ.

# ದೊಡ್ಡಬಾತಿಯಲ್ಲಿ ಇಂದು ತೇರು



ದೊಡ್ಡಬಾತಿ ಗ್ರಾಮದಲ್ಲಿ ಶ್ರೀ ರೇವಣ ಸಿದ್ದೇಶ್ವರ ಸ್ವಾಮಿಯ ಮಹಾ ರಥೋತ್ಸವ ಇಂದು ಜರುಗ ಲಿದೆ. ಇಂದು ಬೆಳಿಗ್ಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿ, ಆವರಗೊಳ್ಳದ ಶ್ರೀ ವೀರ ಭದ್ರೇಶ್ವರ ಸ್ವಾಮಿ ಒಡಗೂಡಿ ಕೋಟೆಯ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಆಗಮಿಸಲಿದೆ. ರಾತ್ರಿ 12 ಗಂಟೆ ನಂತರ ಸ್ವಾಮಿಯ ಇಚ್ಛಾ ಮುಹೂರ್ತದಲ್ಲಿ ರಥೋತ್ಸವ ನಡೆಯಲಿದೆ.

# 22 ರಂದು ಉದ್ಯೋಗ ಮೇಳ


ದಾವಣಗೆರೆ ಮಾ.16- ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯ ಮಿಷನ್ (ದಾವಣಗೆರೆ) ಇವರ ವತಿಯಿಂದ ಇದೇ ದಿನಾಂಕ 22 ರಂದು ಯು.ಬಿ.ಡಿ.ಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉದ್ಯೋಗ ಮೇಳ ನಡೆಯಲಿದೆ.


ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಹತೆ ಹೊಂದಿರುವ ಜಿಲ್ಲೆಯ ಯುವಕ-ಯುವತಿಯರು ಭಾಗವಹಿಸಲು ಗೂಗಲ್ ಫೋರಂ ಲಿಂಕ್ https://tinyurl.com/bdafha6m ನಲ್ಲಿ ಮಾಹಿತಿಯನ್ನು ಭರ್ತಿಗೊಳಿಸಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 8971749636 ಹಾಗೂ ಇಮೇಲ್ ವಿಳಾಸ dsmodvg@gmail.com ಅಥವಾ ಜಿಲ್ಲಾಡಳಿತ ಭವನ, 1ನೇ ಮಹಡಿ, ಕೊಠಡಿ ಸಂಖ್ಯೆ 24, ಬಿ ಬ್ಲಾಕ್, ಪಿ.ಬಿ ರಸ್ತೆ ದಾವಣಗೆರೆ ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಕೆ.ಎನ್. ಗಿರೀಶ್ ತಿಳಿಸಿದ್ದಾರೆ.

# ಮಲೇಬೆನ್ನೂರು: ಇಂದು ಅನ್ನ ಸಂತರ್ಪಣೆ



ಜ್ಯೋತಿ ಚಿತ್ರಮಂದಿರದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಅಖಿಲ ಕರ್ನಾಟಕ ಡಾ. ರಾಜ್ ಕುಮಾರ್ ಅಭಿಮಾನಿ ಗಳ ಸಂಘಗಳ ಒಕ್ಕೂಟ ಮತ್ತು ಡಾ. ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ ಹಾಗೂ ರಾಜರತ್ನ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಆಶ್ರಯದಲ್ಲಿ ನಟ ಪುನೀತ್ ರಾಜ್‌ಕುಮಾರ್ ಅವರ 47ನೇ ಹುಟ್ಟುಹಬ್ಬದ ಅಂಗವಾಗಿ ಅನ್ನ ಸಂತರ್ಪಣೆ ಹಾಗೂ ಪುನೀತ್ ಕಟೌಟ್‌ಗೆ ಹೂವಿನ ವಿಶೇಷ ಅಲಂಕಾರವನ್ನು ಹಮ್ಮಿಕೊಳ್ಳಲಾಗಿದೆ.


## ಕಾರಿಗನೂರಿನ ದೊಗ್ಗಳ್ಳಿ ಶಾಂತಮ್ಮ ನಿಧನ



ಚನ್ನಗಿರಿ ತಾಲ್ಲೂಕು ಕಾರಿಗನೂರು ಗ್ರಾಮದ ವಾಸಿ **ದೊಗ್ಗಳ್ಳಿ ರುದ್ರಪ್ಪನವರ ಧರ್ಮಪತ್ನಿ ಶ್ರೀಮತಿ ದೊಗ್ಗಳ್ಳಿ ಶಾಂತಮ್ಮ** ಅವರು ದಿನಾಂಕ 16.03.2022ರ ಬುಧವಾರ ರಾತ್ರಿ 12.15ಕ್ಕೆ ನಿಧನರಾದರು. ಮೃತರಿಗೆ 87 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ **17.03.2022ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಕಾರಿಗನೂರಿನ ಸ್ವಂತ ಜಮೀನಿನಲ್ಲಿ** ನೆರವೇರಲಿದೆ.


## ಹೊಸಪೇಟೆಯ ಸರ್ಕಾರಿ ಶಾಲೆಗಳಲ್ಲಿ ಹಿಜಾಬ್ ಪರ ಗೋಡೆ ಬರಹ

ಬಳ್ಳಾರಿ, ಮಾ. 16 – ಹಿಜಾಬ್ ಕುರಿತು ಹೈಕೋರ್ಟ್ ತೀರ್ಪು ನೀಡಿದ ಮರು ದಿನ ಹೊಸಪೇಟೆಯ ಕೆಲ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಹಿಜಾಬ್ ಪರ ಘೋಷಣೆಗಳನ್ನು ಬರೆಯಲಾಗಿದೆ. ನಂತರ ಈ ಘೋಷಣೆಗಳನ್ನು ಅಳಿಸಲಾಗಿದೆ. ಈ ಬಗ್ಗೆ ಮೂರು ಪೊಲೀಸ್ ಠಾಣೆಗಳಲ್ಲಿ ನಾಲ್ಕು ಪ್ರಕರಣಗಳನ್ನು ದಾಖಲಿಸಲಾಗಿದೆ.











## ಭಾವಪೂರ್ಣ ಶ್ರದ್ಧಾಂಜಲಿ



ಯಶಸ್ವಿನಿ ಸೊಸೈಟಿಯ ಸಂಸ್ಥಾಪಕರಾದ
ಶ್ರೀ ಬಿ. ರಮೇಶ್ (ಪಿಜೆ)
ಇವರ ಸಹೋದರರಾದ

**ಶ್ರೀ ಬಿ.ಮೃತ್ಯುಂಜಯ**

ಅವರು ದಿನಾಂಕ 14.03.2022ರಂದು ನಿಧನರಾಗಿದ್ದು, ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು,
ಸಿಬ್ಬಂದಿ ವರ್ಗ, ಪಿಗ್ಮಿ ಸಂಗ್ರಹಕಾರರು ಹಾಗೂ ಸರ್ವ ಸದಸ್ಯರು

**ಯಶಸ್ವಿನಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.(ರಿ.)**

ನಂ.318, ಮಳಿಗೆ ನಂ.1, ಬಿ.ಎಸ್.ಎನ್.ಎಲ್. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte